ಎಲ್ಲಾ ಚರ್ಚೆ ಮಾಡಬಹುದು. ಸದ್ಯಕ್ಕೆ ಸರ್ಕಾರದ ಪರವಾಗಿ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಈ ಅಷ್ಯೂರೆನ್ಸ್ ಕೊಟ್ಟಿದ್ದಾರೆ. On the basis of this assurance we can proceed further. We will take it as soon as the Excise Minister comes back.

ಶ್ರೀ ವಾಟಾಳ್ ನಾಗರಾಜ್ : ಇದಕ್ಕೆ ವಿಶೇಷವಾದ ಚರ್ಚೆಗೆ ಅವಕಾಶ ಕೊಡಿ ಸ್ವಾಮಿ.

ಅಧ್ಯಕ್ಷರು : ಎಕ್ಸೈಜ್ ಮಿನಿಸ್ಟರ್ ಬಂದಮೇಲೆ ಕೊಡೋಣ.

SRI M. VEERAPPA MOILY : Excise Minister. He is the Minister incharge of the portfolio. We do not exercise any discussion on it till he comes back. Let us not proceed further.

ಶ್ರೀ ವಾಟಾಳ್ ನಾಗರಾಜ್ : ಈ ಗುತ್ತಿಗೆದಾರರು ಸರ್ಕಾರವನ್ನು ನುಂಗತಕ್ಕವರಿದ್ದಾರೆ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಈ ಜಂಟಿ ಅಧಿವೇಶನದಲ್ಲಿ ದಯಪಾಲಿಸಿದ ಭಾಷಣಕ್ಕೆ ಉತ್ತರ ಕೊಡುವ ಸಂದರ್ಭ ಸರ್ಕಾರಕ್ಕೆ ಬರುವುದಕ್ಕಿಂತಲೂ ಮುಂಚೆ ನಾನು ಪ್ರಾರಂಭದಲ್ಲಿ ಈ ರಾಜ್ಯಪಾಲರ ಭಾಷಣವನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತಾ, ಈ ರಾಜ್ಯಪಾಲರ ಭಾಷಣದಲ್ಲಿ ಅನೇಕ ಉರಿಯುತ್ತಿರುವ ಸಮಸ್ಯೆಗಳಿಗೆ ನಿರ್ದಿಷ್ಟವಾದ ಯಾವುದೇ ಒಂದು ಪರಿಹಾರ ಇಲ್ಲ, ಮಾರ್ಗಸೂಚಿ ಇಲ್ಲ. ಸರ್ಕಾರ ಮುಂದಿನ ವರ್ಷಗಳಲ್ಲಿ ಈ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಯಾವ ಕಾರ್ಯಕ್ರಮಗಳನ್ನು ರೂಪಿಸಿದೆ ಎನ್ನುವುದರ ಬಗ್ಗೆ ಸ್ಪಷ್ಟವಾದ ಮಾತು ಇಲ್ಲ. ಈ ರೀತಿ ಈ ಬರಡು ಭಾಷಣ ಏನು ಇದೆ ಇದನ್ನು ನಾನು ಸಂಪೂರ್ಣ ವಿರೋಧ ಮಾಡುತ್ತಾ ಈ ಸರ್ಕಾರ ಅಧಿಕಾರಕ್ಕೆ ಬಂದ ಕಳೆದ 1 ವರ್ಷದಲ್ಲಿ ಕಳೆದ ರಾಜ್ಯಪಾಲರ ಭಾಷಣದ ಅಲ್ಲಿಂದ ಇಲ್ಲಿಗೆ ಒಂದು ವರ್ಷದ ಅವಧಿಯಲ್ಲಿ ಈ ಸರ್ಕಾರದ ಒಂದು ಆಡಳಿತ ವೈಖರಿ ಬಗ್ಗೆ, ಜನವಿರೋಧಿ ನೀತಿ ಬಗ್ಗೆ, ಅನೇಕ ಭ್ರಷ್ಟಾಚಾರದ ಹಗರಣಗಳ ಬಗ್ಗೆ ಸದನದ ಒಳಗೆ ಹಾಗೂ ಹೊರಗಡೆ ಸಾಕಷ್ಟು ಹೋರಾಟವನ್ನು ಮಾಡಿ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡಿದರೂ ಕೂಡ ಅದರಿಂದ ಯಾವುದೇ ಒಂದು ಉಪಯೋಗ ಆಗಲಿಲ್ಲ. ಒಂದು ವಿಶೇಷವಾದ ಸಂದರ್ಭದಲ್ಲಿ ಒಂದು ಅವಿಶ್ವಾಸ ನಿರ್ಣಯವನ್ನು ತಂದು ಅನೇಕ ಭ್ರಷ್ಟಾಚಾರದ ಹಗರಣಗಳ ದಾಖಲೆಗಳನ್ನು ಈ ಸದನದ ಮುಂದೆ ಇಟ್ಟು ಒತ್ತಾಯ ಮಾಡುವಂತಹ ಪ್ರಯತ್ನವನ್ನು ನಾವು ಮಾಡಿದೆವು, ಅಬಕಾರಿ, ಗ್ರಾನೈಟ್ ಭ್ರಷ್ಟಾಚಾರದ ಹಗರಣಗಳನ್ನು ದಾಖಲೆಗಳೊಡನೆ ಸರ್ಕಾರದ ಗಮನಕ್ಕೆ ತರುವ ಪ್ರಯತ್ನ ಮಾಡಿದೆವು. ಸಾವಿರಾರು ಎಕರೆ ಜಮೀನನ್ನು ರೀಕನ್ವೆ ಮಾಡಿ ದೊಡ್ಡ ದೊಡ್ಡ ಬಿಲ್ಡರ್ಸ್‌ಗೆ ಕೊಡುವ ಪ್ರಯತ್ನವನ್ನು ಸರ್ಕಾರ ಮಾಡಿದಾಗ ಅದನ್ನು ಸರ್ಕಾರದ ಗಮನಕ್ಕೆ ತರುವ ಪ್ರಯತ್ನ ಮಾಡಿದೆವು.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ರೈತ ಸಮುದಾಯಕ್ಕೆ ಕೊಟ್ಟ ಆಶ್ವಾಸನೆಯನ್ನು ಈಡೇರಿಸದೇ 10 ಸಾವಿರ ರೂಪಾಯಿಗಳವರೆಗಿನ ಸಾಲ ಮನ್ನಾ ಮಾಡುತ್ತೇವೆಂದು ಅವರಿಗೆ ಅನ್ಯಾಯ

ಮಾಡಿಕೊಂಡು ಬಂದುದನ್ನು ಸರ್ಕಾರದ ಗಮನಕ್ಕೆ ತರುವ ಪ್ರಯತ್ನವನ್ನು ಮಾಡಿದೆವು. ಅನೇಕ ಭ್ರಷ್ಟ ಅಧಿಕಾರಿಗಳನ್ನು ಒಂದು ಉನ್ನತ ಆಯಕಟ್ಟಿನ ಸ್ಥಾನಕ್ಕೆ ತರುವ ಪ್ರಯತ್ನ ಮಾಡಿದಾಗ ಅದನ್ನು ವಿರೋಧ ಮಾಡುವ ಪ್ರಯತ್ನ ಮಾಡಿದೆವು. ಅದನ್ನು ಸರ್ಕಾರದ ಗಮನಕ್ಕೆ ತರುವ ಪ್ರಯತ್ನ ಮಾಡಿದೆವು. ಇಷ್ಟೆಲ್ಲಾ ಆದರೂ ಕೂಡ ಕೊನೇ ಪಕ್ಷ ಎಲ್ಲಾ ಘಟನೆಗಳನ್ನು, ಸಂಗತಿಗಳನ್ನು ಈ ಸರ್ಕಾರದ ಗಮನಕ್ಕೆ ತಂದಮೇಲೆ ಅವರ ಆಡಳಿತ ವೈಖರಿಯಲ್ಲಿ ಸಾಕಷ್ಟು ಬದಲಾವಣೆ ಮಾಡಿಕೊಳ್ಳಬಹುದು ಎಂದು ಏನು ನಾವು ನಿರೀಕ್ಷೆ ಮಾಡಿದ್ದೆವು ಅದು ಸುಳ್ಳಾಗಿ ಮತ್ತೆ ಈ ಸರ್ಕಾರದ ಆಡಳಿತ ವೈಖರಿ ತೀರಾ ಹದಗೆಡುತ್ತಾ ಬಂದು ತನ್ನದೇ ಆದ ಒಂದು ದೂರದೃಷ್ಟಿ ಇಲ್ಲದೆ, ಜನರ ಹಿತದ ಬಗ್ಗೆ ಚಿಂತನೆ ಮಾಡದೇ ಅಧಿಕಾರವನ್ನು ಮುಂದುವರಿಸಿಕೊಂಡು ಹೋಗುವ ಪ್ರಯತ್ನವನ್ನು ಇವತ್ತು ಈ ಸರ್ಕಾರ ಮಾಡುತ್ತಾ ಇದೆ. ನಾವು ಯಾವುದೇ ರೀತಿಯ ಅಪರಾಧಗಳ ಬಗ್ಗೆ, ಭ್ರಷ್ಟಾಚಾರದ ಹಗರಣಗಳ ಬಗ್ಗೆ ಸದನದಲ್ಲಿ ಸರ್ಕಾರದ ಗಮನವನ್ನು ಸೆಳೆದರೂ ಕೂಡ ಈ ರಾಜಕೀಯ ಅಪರಾಧಗಳನ್ನು ಮಾಡುವ ವ್ಯಕ್ತಿ ಎಷ್ಟು ದೊಡ್ಡವರಿದ್ದರೂ ಕೂಡ ಅವರ ಬಗ್ಗೆ ಒಂದು ಕ್ರಿಮಿನಲ್ ಪ್ರೊಸೀಡಿಂಗ್ಸ್ ಮೂಲಕ ತನಿಖೆಯಾಗಿ ಎಲ್ಲಿಯವರೆಗೆ ಶಿಕ್ಷೆ ಆಗುವುದಿಲ್ಲವೋ ಅಲ್ಲಿಯವರೆಗೆ ಬಹುಶಃ ಈ ರೀತಿ ಅನೇಕ ಭ್ರಷ್ಟಾಚಾರ ಹಗರಣಗಳನ್ನು ಇಲ್ಲಿ ಬಯಲು ಮಾಡಿದರೂ ಕೂಡ ಯಾವುದೇ ಒಂದು ನ್ಯಾಯ ಜನರಿಗೆ ಸಿಗಬೇಕೆನ್ನುವ ವಿಶ್ವಾಸವನ್ನು ಇವತ್ತು ಕಳೆದುಕೊಳ್ಳುವ ಒಂದು ವಿಚಿತ್ರ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಯಾರು ಈ ನಾಡಿನ ಸಂಪತ್ತನ್ನು ಉಳಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಒಂದು ದೊಡ್ಡ ಜವಾಬ್ದಾರಿಯನ್ನು ಹೊರತಕ್ಕ ಅಧಿಕಾರಕ್ಕೆ ಬರುತ್ತಾರೋ ಅದೇ ಜನ ಈ ನಾಡಿನ ಸಂಪತ್ತನ್ನು ಕೊಳ್ಳೆಹೊಡೆಯುವ ಪ್ರಯತ್ನ ಮಾಡುತ್ತಾರೆ,

ಸರ್ಕಾರದ ಬೊಕ್ಕಸಕ್ಕೆ ಬರತಕ್ಕ ಕೋಟ್ಯಾಂತರ ರೂಪಾಯಿಗಳನ್ನು ಉಳಿಸುವುದರ ಬದಲಾಗಿ, ಆ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಜನಹಿತವನ್ನು ಮಾಡುವುದರ ಬದಲಾಗಿ ಸರ್ಕಾರದ ಬೊಕ್ಕಸಕ್ಕೆ ಬರುವ ಹಣವನ್ನೆ ಇವತ್ತು ಲೂಟಿ ಮಾಡುವಂತಹ ಅನೇಕ ಹಗರಣಗಳ ಬಗ್ಗೆ, ಪ್ರಕರಣಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವಂತಹ ಪ್ರಯತ್ನವನ್ನು ನಾನು ಇದುವರೆಗೆ ಮಾಡಿದ್ದೇನೆ. ನಿನ್ನೆ ಈ ರಾಜ್ಯದ ಮಾಜಿ ಮುಖ್ಯಮಂತ್ರಿಗಳು ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಈ ಸರ್ಕಾರದ ಆಡಳಿತದ ವೈಖರಿ ಬಗ್ಗೆ ಕೆಳಗಿನಿಂದ ಮೇಲಿನವರೆಗೆ ಯಾವರೀತಿ ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂದು ಹೇಳಿದರು. ಅಧಿಕಾರಿಗಳನ್ನು ಭ್ರಷ್ಟಾಚಾರದ ಹಗರಣಗಳಲ್ಲಿ ಸಿಕ್ಕಿಕೊಂಡು ಏತಕ್ಕೋಸ್ಕರ ಈ ರೀತಿ ಕೆಲಸ ಮಾಡುತ್ತೀರಿ ಅಂದರೆ ನಾವು ಮೇಲಿರುವಂತಹ ಜನಗಳಿಗೆ ದುಡ್ಡು ಕೊಡಬೇಕು, ಮತ್ತು ನಾವು ದುಡ್ಡು ಕೊಟ್ಟೇ ಈ ಸ್ಥಾನಗಳಿಗೆ ಬಂದಿದ್ದೇವೆ, ಅದಕ್ಕಾಗಿ ಇದನ್ನು ಮಾಡುತ್ತಿದ್ದೇವೆಂದು ಧೈರ್ಯವಾಗಿ ಅಧಿಕಾರಿಗಳು ಮಾತನಾಡುತ್ತಾರೆಂದು ಹೇಳಿದರು. ಅಧಿಕಾರಿಗಳು ದುಡ್ಡು ತೆಗೆದುಕೊಳ್ಳದೆ ಕೆಲಸ ಮಾಡುವುದಿಲ್ಲವೆಂದು, ಕುಂತಲ್ಲಿ, ನಿಂತಲ್ಲಿ, ಬಸ್‌ಸ್ಟ್ಯಾಂಡ್‌ಗಳಲ್ಲಿ, ರಸ್ತೆಗಳಲ್ಲಿ ಜನ ತಲೆತಗ್ಗಿಸುವಂತಹ ರೀತಿಯಲ್ಲಿ ಮಾತನಾಡಿಕೊಳ್ಳುತ್ತಾರೆ, ಇದು ಬದಲಾವಣೆಯಾಗದಿದ್ದರೆ ಜನಗಳಿಗೆ ಮುಖ ತೋರಿಸುವುದಕ್ಕಾಗುವುದಿಲ್ಲ, ಅಂತಹ ಪರಿಸ್ಥಿತಿ ಒದಗಿ ಬಂದಿದೆಯೆಂದು ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲ್‌ರವರೇ ಹೇಳಿದಮೇಲೆ ನಾನು ಬಹುಶಃ ಈ ಭ್ರಷ್ಟಾಚಾರ ಯಾವರೀತಿ ತುಟ್ಟತುದಿ

ಮುಟ್ಟಿದೆ ಎಂಬುದನ್ನು ಮತ್ತೊಮ್ಮೆ ವಿವರಣೆ ಕೊಡುವುದಕ್ಕೆ ಹೋಗುವುದಿಲ್ಲ, ಅದರ ಅಗತ್ಯವಿಲ್ಲವೆಂದು ನಾನು ಭಾವಿಸುತ್ತೇನೆ. ನಾನು ಗ್ರಾಮಾಂತರ ಪ್ರದೇಶದಿಂದ ಬಂದಂತಹವನು. ಹುಟ್ಟುಹಬ್ಬಗಳನ್ನು ಆಚರಿಸಿ ನನಗೆ ಅಭ್ಯಾಸವಿಲ್ಲ. ಯಡಿಯೂರಪ್ಪನವರೇ ನೀವು 50ನೇ ವರ್ಷಕ್ಕೆ ಕಾಲಿಡುತ್ತಿದ್ದೀರಿ. ನಿಮಗೆ ಸಾಕಷ್ಟು ವಯಸ್ಸು ಆಗುತ್ತಿದೆಯೆಂದು ಮಾನ್ಯ ಅಧ್ಯಕ್ಷರು ಜ್ಞಾಪಿಸಿದರು ಈ ಸಮಾಜದ ಋಣವನ್ನು ತೀರಿಸುವಂತಹ ಜವಾಬ್ದಾರಿ ನಿಮ್ಮ ಮೇಲಿದೆ ಎನ್ನುವ ಜ್ಞಾಪಕವನ್ನು ನನಗೆ ಮಾಡಿದ್ದಾರೆಂದು ನಾನು ಭಾವಿಸಿದ್ದೇನೆ. ಈ ರಾಜ್ಯದ ರೈತ ಸಮುದಾಯದ ಋಣವನ್ನು ನಾವು ತೀರಿಸಬೇಕು. ಬಹುಶಃ ನಾನು ಎಲ್ಲೋ ಇದ್ದವನು ಶಿಕಾರಿಪುರ ತಾಲ್ಲೂಕಿಗೆ ಬಂದಾಗ ಆ ತಾಲ್ಲೂಕಿನಲ್ಲಿರತಕ್ಕ ಹರಿಜನ-ಗಿರಿಜನರು, ದೀನದಲಿತರು, ರೈತ ಸಮೂಹ ನನ್ನನ್ನು ಒಬ್ಬ ಶಾಸಕನನ್ನಾಗಿ ಮಾಡಿ ಇಲ್ಲಿಗೆ ಕಳುಹಿಸಿ ಕೊಡದಿದ್ದರೆ ನಾನು ಈ ಮಟ್ಟಕ್ಕೆ ಬೆಳೆಯುವಂತಹ ಅವಕಾಶ ಸಿಗುತ್ತಿರಲಿಲ್ಲ. ಯಾರು ನಮ್ಮನ್ನು ಇಲ್ಲಿಗೆ ಆರಿಸಿ ಕಳುಹಿಸಿ ಕೊಟ್ಟರೋ ಅವರ ಸ್ಥಿತಿಗತಿ ಸುಧಾರಿಸಿಲ್ಲ. ನನ್ನ ಸ್ಥಿತಿಗತಿ ಸುಧಾರಣೆಯಾಗಿದೆಯೇ ವಿನಹ ಅವರ ಸ್ಥಿತಿಗತಿ ಏನೂ ಸುಧಾರಣೆಯಾಗಿಲ್ಲ. ನನ್ನನ್ನು ನಂಬಿರುವ ಜನಗಳಿಗಾಗಲಿ,

ನನ್ನ ಕ್ಷೇತ್ರಕ್ಕಾಗಲಿ, ಯಾರ ಪರವಾಗಿ ಕೆಲಸ ಮಾಡಿ ಅವರು ನೆಮ್ಮದಿಯಿಂದ ಜೀವನವನ್ನು ಮಾಡಬೇಕೆನ್ನುವ ಹಂಬಲದಿಂದ ನಮ್ಮನ್ನು ಇಲ್ಲಿಗೆ ಕಳುಹಿಸಿಕೊಟ್ಟರೋ ಆ ಕೆಲಸವನ್ನು ಮಾಡುವುದಕ್ಕೆ ಆಗಿಲ್ಲ. ಅನೇಕ ರಾಜಕೀಯ ಒತ್ತಡದಿಂದ ಕಾಂಗ್ರೆಸ್ ಪಕ್ಷ ಮತ್ತೊಮ್ಮೆ ಅಧಿಕಾರಕ್ಕೆ ಬಂದಮೇಲೆ ವಿಶೇಷವಾಗಿ ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ಎಲ್ಲಿದ್ದಾರೆ, ಎಲ್ಲಿ ಬಿಜೆಪಿಯ ಶಾಸಕರು ಆರಿಸಿ ಬಂದಿದ್ದಾರೆ, ಅಲ್ಲಿ ಯಾವುದೇ ಕೆಲಸಕಾರ್ಯಗಳು ಆಗಬಾರದು, ಮತ್ತು ಆ ಪಕ್ಷದ ಕಾರ್ಯಕರ್ತರ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಹೊರಿಸಿ, ಅಡ್ಡಿ ಆತಂಕಗಳನ್ನು ಮಾಡಿ ಪೋಲೀಸ್ ಇಲಾಖೆಯ ಮೂಲಕ ನಮ್ಮ ಕಾರ್ಯವನ್ನು ಮುಂದುವರಿಸದಹಾಗೆ ನಿಲ್ಲಿಸುವಂತಹ ಪ್ರಯತ್ನ ಮಾಡುವಂತಹ ಒಂದು ರೀತಿಯಲ್ಲಿವೆ ಈ ಪೋಲೀಸ್‌ಠಾಣೆಗಳು, ಕಾಂಗ್ರೆಸ್ ಕಛೇರಿಗಳು ಎನ್ನುವಂತಹ ಭಾವನೆ ಇವತ್ತು ಜನರಲ್ಲಿ ಮೂಡಿದೆ. ಅನೇಕ ಪೋಲೀಸ್ ಠಾಣೆಗಳ ಸಬ್‌ಇನ್ಸ್‌ಪೆಕ್ಟರ್‌ಗಳು ಅಲ್ಲಿರುವ ಸರ್ಕಲ್ ಇನ್ಸ್‌ಪೆಕ್ಟರ್ ಎಸ್‌ಪಿಗಳೂ ಸಹ ರಾಜಕಾರಣದ ವಿಷಯದಲ್ಲಿ ಕಾಂಗ್ರೆಸ್ ಕಾರ್ಯಕರ್ತರಂತೆ ವರ್ತನೆ ಮಾಡುತ್ತಾ, ಕಾಂಗ್ರೆಸ್ ಮುಖಂಡರು ಏನು ಹೇಳುತ್ತಾರೆ, ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ, ಅದು ನ್ಯಾಯಬದ್ಧವಾಗಿ ಇದೆಯೋ ಇಲ್ಲವೋ ಎಂದು ಪೋಲೀಸ್ ಇಲಾಖೆ ಯಾವುದೇ ಒಂದು ಚಿಂತನೆಯನ್ನು ಮಾಡದೆ ಒಂದು ರೀತಿ ಸೇಡು ತೀರಿಸಿಕೊಳ್ಳುವ ರೀತಿಯಲ್ಲಿ ನಿಮ್ಮ ಕಾಂಗ್ರೆಸ್ ಪಕ್ಷ ಪೋಲೀಸ್ ಇಲಾಖೆಯನ್ನು ಉಪಯೋಗ ಮಾಡಿಕೊಳ್ಳುವ ಮಟ್ಟಕ್ಕೆ ಇವತ್ತು ಹೋಗಿದೆ. ಇಂತಹ ಒಂದು ಸಂದರ್ಭದಲ್ಲಿ ನಾನು ಯೋಚನೆ ಮಾಡುತ್ತಾ ಇದ್ದೇನೆ.

ಕಳೆದ ಎರಡು ವರ್ಷಗಳಿಂದ ಈಚೆಗೆ ಮಾನ್ಯ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಗಳಾದ ಮೇಲೆ ವಿಧಾನ ಸಭೆಗೆ ಕಾಲಿಟ್ಟ ತಕ್ಷಣ ಈ ರಾಜ್ಯದ ವೇತನ 10 ಸಾವಿರ ರೂಪಾಯಿಗಳವರೆಗಿನ ಸಾಲವನ್ನು ಮನ್ನಾ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದರು ಅದನ್ನು ಈಡೇರಿಸಬೇಕೆಂದು ಹೇಳಿ ಹೋರಾಟವನ್ನು ವಿಧಾನಸಭೆಯ ಒಳಗೆ ಮತ್ತು ಹೊರಗೆ ನಾವು ಮಾಡಿದ್ದೇವೆ. ಆದರೆ ಈಗತಾನೇ ನಾನು ಪ್ರಸ್ತಾಪ ಮಾಡಿದಂತೆ, ಸುಮಾರು 15-20ಲಕ್ಷ ಕುಟುಂಬಗಳಿಗೆ ಸೇರಿದಂತಹ ಸುಮಾರು 300 ಕೋಟಿ ರೂಪಾಯಿಗಳನ್ನು ಅಂದರೆ

ರೈತನ 10 ಸಾವಿರದವರೆಗಿನ ಸಾಲವನ್ನು ಮನ್ನಾ ಮಾಡುವುದಕ್ಕೆ ನಮ್ಮ ಸರ್ಕಾರದಲ್ಲಿ ಹಣವಿಲ್ಲವೆಂದು ಹೇಳುತ್ತಿದ್ದಾರೆ. ಆದರೆ 17 ಜನ ಅಬಕಾರಿ ಕಂಟ್ರಾಕ್ಟ್‌ದಾರರಿಗೆ ಸಂಬಂಧಪಟ್ಟಂತೆ 36 ಕೋಟಿ ರೂಪಾಯಿಗಳನ್ನು, ಅವರು ಕೊಡಬೇಕಾದ ಬಡ್ಡಿಯನ್ನು ಮನ್ನಾ ಮಾಡುವುದಕ್ಕೋಸ್ಕರ ಮತ್ತು ಅವರು ಕೊಡಬೇಕಾದ ಸುಮಾರು 45 ಕೋಟಿ ರೂಪಾಯಿಗಳನ್ನು ಇನ್‌ಸ್ಟಾಲ್‌ಮೆಂಟ್‌ನಲ್ಲಿ ಕೊಡುವುದಕ್ಕೋಸ್ಕರ ರೂಲ್ಸ್ ಅಮೆಂಡ್‌ಮೆಂಟ್ ಮಾಡಿಕೊಳ್ಳುವ ಮಟ್ಟಕ್ಕೆ ಸರ್ಕಾರ ಬಂದು ತಲುಪಿದೆ ಎನ್ನುವುದಾದರೆ ಬಹುಶಃ ಈ ಸರ್ಕಾರ ನಾಲ್ಕೂವರೆ ಕೋಟಿ ಜನರ ನೆಮ್ಮದಿಗಾಗಿ ಒಂದು ಕಾರ್ಯಕ್ರಮವನ್ನು ರೂಪಿಸುವುದಕ್ಕೆ ಬದಲಾಗಿ ಯಾರು ಇವತ್ತು ಈ ಸರ್ಕಾರವನ್ನು ಸಾಕುತ್ತಿದ್ದಾರೋ ಅಥವಾ ಯಾರ ಒಂದು ಕಪಿಮುಷ್ಠಿಯಲ್ಲಿ ಎಕ್ಸೈಸ್ ಲಾಬಿಯಲ್ಲಿ ಈ ಸರ್ಕಾರ ಸಿಕ್ಕಿಬಿದ್ದಿದೆಯೋ ಅವರನ್ನು ಉಳಿಸಲಿಕ್ಕೋಸ್ಕರ, ಅವರ ಋಣವನ್ನು ತೀರಿಸುವುದಕ್ಕೋಸ್ಕರ ಯಾವ ಮಟ್ಟಕ್ಕೆ ಬೇಕಾದರೂ ಹೋಗುವುದಕ್ಕೆ ಸಿದ್ಧರಿದ್ದೇವೆ ಎಂದು ಹೇಳಿ ಜನರಿಗೆ ಸಾಬೀತು ಮಾಡುವಂಥ ಒಂದು ಪ್ರಯತ್ನವನ್ನು ಇವತ್ತು ಸರ್ಕಾರ ಮಾಡುತ್ತಿದೆ. ಅದಕ್ಕಾಗಿ ನಾನು ನಮ್ಮ ಪಕ್ಷದ ಪ್ರಮುಖರಲ್ಲಿ ಸಹ ವಿನಂತಿ ಮಾಡಿ ಅವರ ಅನುಮತಿಯನ್ನು ಪಡೆಯುವಂಥ ಪ್ರಯತ್ನ ಮಾಡುತ್ತಿದ್ದೇನೆ. ಇವತ್ತು ಒಂದು ವಿಶೇಷವಾದ ಅಂದರೆ ಕೊನೆಯಪಕ್ಷ ಹುಟ್ಟು ಹಬ್ಬದ ಸಂದರ್ಭದಲ್ಲಾದರೂ ರಾಜ್ಯದ ರೈತನ ಋಣವನ್ನು ತೀರಿಸುವುದಕ್ಕೆ ನಮ್ಮಿಂದ ಸಾಧ್ಯವಾಗಲಿಲ್ಲ. ಆ ದೃಷ್ಟಿಯಿಂದ ಸದನದ ಹೊರಗಡೆ ಹೋರಾಟ ಮಾಡುವುದಕ್ಕಾದರೂ ಉಪಯೋಗವಾಗಲಿ ಎನ್ನುವಂಥ ಒಂದು ಸಂದರ್ಭದಲ್ಲಿ ಯಾವ ರಾಜ್ಯದ ರೈತ ಸಮೂಹಕ್ಕೆ ನೀವು ಭರವಸೆ ಕೊಟ್ಟು ಕಳೆದ ಎರಡೂವರೆ ವರ್ಷದಿಂದ ರೈತರ ಸಾಲದ ಬಲಾತ್ಕಾರದ ವಸೂಲಾತಿಗೆ ತಡೆಯಾಜ್ಞೆ ಕೊಟ್ಟಿದ್ದೇವೆ ಎಂದು ಹೇಳಿ, ಪ್ರಧಾನಿಯವರಿಗೆ ಕೇಂದ್ರಸರ್ಕಾರದ ಹಣಕಾಸಿನ ಸಚಿವರಿಗೆ, ಕೃಷಿ ಸಚಿವರಿಗೆ ಸ್ವತಃ ಮುಖ್ಯ ಮಂತ್ರಿಯವರೇ ಹೋಗಿ ಮನವಿಯನ್ನು ಕೊಡಿಸಿ 10 ಸಾವಿರದವರೆಗಿನ ರೈತನ ಸಾಲ ಮನ್ನಾ ಮಾಡಿಡಿದ್ದರೆ, ಈ ಒಂದು ಷರತ್ತುಗಳಿಂದ ರೈತ ಸಮೂಹಕ್ಕೆ ಅನುಕೂಲವಾಗುವುದಿಲ್ಲ ಆದುದರಿಂದ ಆ ಶರತ್ತುಗಳನ್ನು ತೆಗೆದುಹಾಕಿ ರೈತನ ಸಾಲ ಮನ್ನಾ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ನಮ್ಮನ್ನು ಕರೆದುಕೊಂಡು ಹೋಗಿ ಮನವಿಯನ್ನು ಕೊಡಿಸಿದರು. ಆದರೆ ಈಗ ಬಲಾತ್ಕಾರದ ಸಾಲ ವಸೂಲಾತಿ ಪ್ರಾರಂಭವಾಗಿದೆ. ಎರಡನೆಯದು, ಕಾವೇರಿ ಮತ್ತು ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಯಾವ ನೀರಾವರಿ ಯೋಜನಗಳನ್ನು ಕಾರ್ಯರೂಪಕ್ಕೆ ತರಬೇಕಿತ್ತು ಆ ಬಗ್ಗೆ ವಿಶೇಷವಾದಂಥ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನವನ್ನು ಇವತ್ತು ಈ ಸರ್ಕಾರ ಮಾಡದೇ ನೀರಾವವಿ ಯೋಜನೆಗಳು ಕಾರ್ಯರೂಪಕ್ಕೆ ಬಂದಿಲ್ಲ. ಅದೇರೀತಿ ಗ್ರಾನೈಟ್ ವ್ಯವಹಾರದಲ್ಲಿ ಸಹ ಸುಮಾರು 210 ಜನರಿಗೆ ಒಂದೇ ದಿವಸ ಲೈಸೆನ್ಸ್ ಕೊಟ್ಟು ಇದರಿಂದ ಈ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದಂಥ ಸುಮಾರು 350 ಕೋಟಿ ರೂಪಾಯಿಗಳನ್ನು ಲೂಟಿ ಮಾಡುವ ಪ್ರಯತ್ನ ನಡೆದಿದೆ. ಈ ಬಗ್ಗೆ ಬಹುಶಃ ನಮ್ಮ ಮಾಲೀಕರು ಯಾರಿದ್ದಾರೆ ಅವರ ಹತ್ತಿರ ಈ ಫಿರ್ಯಾದನ್ನು ತೆಗೆದುಕೊಂಡು ಹೋಗಿ ಈ ಸರ್ಕಾರ ಏನು ಭ್ರಷ್ಟಾಚಾರದಲ್ಲಿ ತೊಡಗಿದೆ,

ಜನಹಿತವನ್ನು ಕಡೆಗಣಿಸಿದೆ ಎಂಬ ಈ ಸಂಗತಿಯನ್ನು ಜನತೆಗೆ ತಿಳಿಸುವ ದೃಷ್ಟಿಯಿಂದ ಬಹುಶಃ ಈ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸದೆ, ಶಾಸಕನಾಗಿ ನಾನು ಇಲ್ಲಿ ಕೆಲಸ ಮಾಡಬೇಕಾಗಿದ್ದರೂ ಸಹ, ಒಂದು ರೀತಿಯಲ್ಲಿ ಗೋರ್ಕಲ್ಲ ಮೇಲೆ ಮಳೆ ಸುರಿದಂಥ ಒಂದು ವಿಚಿತ್ರವಾದ ಪರಿಸ್ಥಿತಿ ಒದಗಿರುವ

ಸಂದರ್ಭದಲ್ಲಿ ಮೂರು ಪ್ರಮುಖವಾದ ಅಂಶಗಳನ್ನು ಇಟ್ಟುಕೊಂಡು ಹೇಳುತ್ತೇನೆ ಮೊದಲನೆಯದು, ನೀವು ಆಶ್ವಾಸನೆ ಕೊಟ್ಟಂತೆ ಈ ರಾಜ್ಯದ ರೈತರಿಗೆ ಯಾವುದೇ ಶರತ್ತು ಹಾಕದೆ 10ಸಾವಿರ ರೂಪಾಯಿಗಳವರೆಗಿನ ಸಾಲವನ್ನು ಮನ್ನಾ ಮಾಡಬೇಕು, ಬಲಾತ್ಕಾರದ ವಸೂಲಿಯನ್ನು ಬಿಡಬೇಕು. ಕಾವೇರಿ, ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಬಚಾವತ್ ಆಯೋಗದ ತೀರ್ಪಿನ ಪ್ರಕಾರ 2 ಸಾವಿರ ಇಸವಿಯೊಳಗೆ ಕೃಷ್ಣಾ ಬೇಸಿನ್‌ನ ಕೆಲಸಕಾರ್ಯಗಳು ಮುಗಿಯಬೇಕು ಎಂದಿದ್ದರೆ, ಕಾವೇರಿ ಬೇಸಿನ್‌ನ ಕೆಲಸಕಾರ್ಯಗಳು ಆಗಬೇಕು ಎಂದಿದ್ದರೆ, ಕೊನೆಯಪಕ್ಷ ಇದಕ್ಕಾಗಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ತೆಗೆದಿಡಬೇಕು.

ಶ್ರೀ ಬಸವರಾಜ ರಾಯರೆಡ್ಡಿ : ಇಲ್ಲಿ ಯಾರೂ ನೋಟ್ ಮಾಡಿಕೊಳ್ಳುತ್ತಿಲ್ಲ. ಯಾವ ಮಂತ್ರಿಗಳೂ ಇದರ ಕಡೆ ಗಮನ ಕೊಡುತ್ತಿಲ್ಲ. ನಿಜವಾಗಿಯೂ ಇದು ಗೋರ್ಕಲ್ಲ ಮೇಲೆ ಮಳೆ ಸುರಿದ ಹಾಗೆ ಆಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಇಲ್ಲಿ ಬರೆದುಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಪ್ರಮುಖವಾದ ಮೂರು ಬೇಡಿಕೆಗಳನ್ನು ಇಟ್ಟುಕೊಂಡು ಬಹುಶಃ ರಾಜ್ಯದ ಉದ್ದಗಲಕ್ಕೆ ಹೋಗುವ ಅಗತ್ಯವಿದೆಯೆಂದು ಭಾವಿಸುತ್ತೇನೆ. ನಾನು ಪ್ರಾರಂಭದಲ್ಲಿ ಹೇಳಿದ್ದಂತೆ, ಈ ರಾಜ್ಯದ ರೈತನ ಸಾಲ ಮನ್ನಾ ಮಾಡುವ ದೃಷ್ಟಿಯಿಂದ ಈ ಬಜೆಟ್‌ನಲ್ಲಿ ಕೊನೆಯಪಕ್ಷ ಮುನ್ನೂರು ಕೋಟಿ ರೂಪಾಯಿಗಳನ್ನು ಸಹಕಾರ ಸಂಘಗಳಿಗೆ ಅವರ ಪರವಾಗಿ ತುಂಬುವುದಕ್ಕೋಸ್ಕರ ತೆಗೆದಿಡಬೇಕು. ಕೃಷ್ಣಾ ಮತ್ತು ಕಾವೇರಿ ಬೇಸಿನ್‌ನ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸುವುದಕ್ಕೋಸ್ಕರ ಪ್ರತಿವರ್ಷ ಒಂದು ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ತೆಗೆದಿಡದಿದ್ದರೆ ಕೆಲಸ ಆಗುವುದಿಲ್ಲ. ಅದಕ್ಕೋಸ್ಕರ ಒಂದು ಸಾವಿರ ಕೋಟಿ ರೂಪಾಯಿಗಳನ್ನು ತೆಗೆದಿಡಬೇಕೆಂದು ನಾನು ಹೇಳುತ್ತೇನೆ. ಮೂರನೆಯದಾಗಿ ಯಾವ ಒಂದು ಎಕ್ಸೈಸ್ ರೂಲ್ಸ್‌ಗೆ ತಿದ್ದುಪಡಿಯನ್ನು ತಂದು, ಇದು ಕೇವಲ ಮೇಲ್ನೋಟಕ್ಕೆ ಕಾಣುವಂಥ 38ಕೋಟಿ ರೂಪಾಯಿ ಬಡ್ಡಿ ಮನ್ನಾ ಮಾಡುವುದಾಗಲೀ, ಅಥವಾ 40 ಕೋಟಿ ಅಸಲಿಗೆ ಕಂತು ಕೊಡುವುದು ಮಾತ್ರ ಉಳಿದಿಲ್ಲ. ಕಳೆದ ಹತ್ತು ವರ್ಷಗಳಿಂದ ಸರ್ಕಾರದ ಬೊಕ್ಕಸಕ್ಕೆ ಎಕ್ಸೈಸ್ ಡಿಪಾರ್ಟ್‌ಮೆಂಟ್‌ನಲ್ಲಿ ಬೇನಾಮಿ ಹೆಸರಿನಲ್ಲಿ ಕಂಟ್ರಾಕ್ಟ್ ಮಾಡಿಕೊಂಡೇ ಬಂದಿದ್ದಾರೆ. ಒಂದು ಅಂದಾಜಿನ ಪ್ರಕಾರ ಸುಮಾರು ಮುನ್ನೂರು ಕೋಟಿ ರೂಪಾಯಿಗಳಿಗೂ ಹೆಚ್ಚು ಹಣ ಸರ್ಕಾರದ ಬೊಕ್ಕಸಕ್ಕೆ ಬರಬೇಕಾಗಿದೆ. ನೂರು ಕೋಟಿ ರೂಪಾಯಿಗಳಿಗೂ ಹೆಚ್ಚಿಗೆ ಬಡ್ಡಿ ಇದೆ.

ಇದಕ್ಕಾಗಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಕಳೆದ ಹತ್ತು ವರ್ಷಗಳಿಂದ ಯಾರ್ಯಾರ ಹೆಸರಿಗೆ ಎಕ್ಸೈಸ್ ಕಂಟ್ರಾಕ್ಟ್, ಲೈಸೆನ್ಸ್ ತೆಗೆದುಕೊಂಡಿದ್ದಾರೆ, ಬಿಡ್‌ನಲ್ಲಿ ಭಾಗವಹಿಸಿದ್ದಾರೆ, ದೊಡ್ಡ ದೊಡ್ಡ ಕಂಟ್ರಾಕ್ಟರ್‌ಗಳ ಕಾರು ಡ್ರೈವರ್ ಜವಾನರ ಹೆಸರಿನಲ್ಲಿ ಕಂಟ್ರಾಕ್ಟನ್ನು ಕೊಡಿಸಿ ಹಣವನ್ನು ಲೂಟಿ ಮಾಡುವ ಪ್ರಯತ್ನ ನಡೆದಿದೆ, ಇದರ ಬಗ್ಗೆ ಒಂದು ವೈಟ್‌ಪೇಪರ್ ಅನ್ನು ಹೊರಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಡಿಮ್ಯಾಂಡ್ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. ಈ ಮೂರು ಬಹಳ ಪ್ರಮುಖವಾದಂಥ ಅಂಶಗಳು. ಒಂದು ರೈತನ ಹತ್ತು ಸಾವಿರ ರೂಪಾಯಿಗಳವರೆಗೆ ಸಾಲವನ್ನು ಮನ್ನಾ ಮಾಡುವುದಕ್ಕೆ ಈ ಬಜೆಟ್‌ನಲ್ಲಿ ಸಹಕಾರ ಸಂಘಗಳಿಗೆ ಅವನ ಪರವಾಗಿ ತುಂಬುವುದಕ್ಕೆ ಮುನ್ನೂರು ಕೋಟಿ ರೂಪಾಯಿಗಳನ್ನು ತೆಗೆದಿಡಬೇಕು. ಕೃಷ್ಣಾ- ಕಾವೇರಿ ಜಲಾನಯನ ಪ್ರದೇಶದ ಕೆಲಸ ಕಾರ್ಯಗಳನ್ನು

ಪೂರ್ಣ ಮಾಡುವುದಕ್ಕೋಸ್ಕರ ಈ ವರ್ಷ ಒಂದು ಸಾವಿರ ಕೋಟಿ ರೂಪಾಯಿಗಳನ್ನು ತೆಗೆದಿಡಬೇಕು. ಮತ್ತು ಎಕ್ಸೈಸ್ ಮಾಲೀಕರಿಗೆ ಅನುಕೂಲ ಮಾಡುವುದಕ್ಕೋಸ್ಕರ, ಇದು ಒಂದು ರೀತಿಯ ಹಗಲು ದರೋಡೆ ಎಂದರೆ ತಪ್ಪಾಗಲಿಕ್ಕಿಲ್ಲ.

3-30 ಪಿ.ಎಂ

ಈ ಎಕ್ಸೈಸ್ ರೂಲ್‌ನ್ನು ಅಮೆಂಡ್‌ಮಾಡಿ ಅವರಿಗೆ ಅನುಕೂಲ ಮಾಡಿಕೊಡುವ ಪ್ರಯತ್ನ ನಡೆಯುವುದನ್ನು ಬೇಷರತ್ತನಾಗಿ ವಾಪಸ್ ಪಡೆಯಬೇಕೆಂಬ ಒತ್ತಾಯವನ್ನು ತರುವ ದೃಷ್ಟಿಯಿಂದ ಇಡೀ ರಾಜ್ಯದ ಜನತೆಗೆ, ಈ ಸರ್ಕಾರ ಜನಹಿತ ಮರೆತು ಏನು ಅನ್ಯಾಯ ಮಾಡುತ್ತಿದೆ ಎಂಬ ಸಂಗತಿಯನ್ನು ತಿಳಿಸುವ ದೃಷ್ಟಿಯಿಂದ, ವಿಧಾನ ಸಭೆಯ ಸದಸ್ಯನಾಗಿ, ಇಲ್ಲಿ ಅನೇಕ ಸತ್ಯಸಂಗತಿಗಳನ್ನು ಗಮನಕ್ಕೆ ತಂದರೂ, ಅದು ಉಪಯೋಗವಾಗಿಲ್ಲ ಎನ್ನುವುದು ಮನದಟ್ಟಾದ ಮೇಲೆ ನಾಳೆಯಿಂದ ರಾಜ್ಯದ ಉದ್ದಗಲಕ್ಕೂ ಹೋಗಿ, ಈ ರಾಜ್ಯದ ನಾಲ್ಕೂವರೆ ಕೋಟಿ ಜನರ ಪ್ರತಿನಿಧಿಯಾಗಿರುವಂಥ ಈ ಸರ್ಕಾರ, ಅವರ ಹಿತವನ್ನು ಮರೆತು ಸರ್ಕಾರದ ಬೊಕ್ಕಸಕ್ಕೆ ಬರಬೇಕಾಗ ಹಣವನ್ನು ಲೂಟಿ ಮಾಡತಕ್ಕಂಥ, ಮನಬಂದಹಾಗೆ ಅಧಿಕಾರ ನಡೆಸಿಕೊಂಡು ಹೋಗುವಂಥ ಪ್ರಯತ್ನ ಮಾಡುತ್ತಿದೆ. ಈ ದೂರನ್ನು ತೆಗೆದುಕೊಂಡು ಜನಗಳ ಮುಂದೆ ಹೋಗಬೇಕೆಂಬ ದೃಷ್ಟಿಯಿಂದ, ನಾನು ವಿಧಾನ ಸಭೆಯ ಕಾರ್ಯಕಲಾಪಗಳಲ್ಲೂ ಭಾಗವಹಿಸದೆ, ಇಡೀ ರಾಜ್ಯದಲ್ಲಿ ಪ್ರವಾಸ ಮಾಡಬೇಕು, ಲಕ್ಷಾಂತರ ಜನ ರೈತನ್ನೂ ಬಡವರನ್ನೂ, ಕೂಲಿ ಕಾರ್ಮಿಕರನ್ನೂ ಕರೆದುಕೊಂಡು ಬಂದು ಬೆಂಗಳೂರನ್ನು ತಲುಪಿಸಿ, ಇಲ್ಲಿ ಆಗುತ್ತಿರತಕ್ಕ ಅವ್ಯವಹಾರದ ಬಗ್ಗೆ ಸರ್ಕಾರಕ್ಕೆ ಕೊನೆಯ ಎಚ್ಚರಿಕೆಯನ್ನು ಕೊಡಬೇಕೆಂಬ ದೃಷ್ಟಿಯಿಂದ ಒಂದು ಕಾರ್ಯಕ್ರಮವನ್ನು ರೂಪಿಸಬೇಕೆಂದು ಯೋಚನೆ ಮಾಡುತ್ತಿದ್ದೇನೆ. ಯಾವುದಾದರೊಂದು ರಾಜ್ಯದ ಅಭಿವೃದ್ಧಿ ಸಾಧನೆ ಆಗಬೇಕಾದರೆ, ಅಲ್ಲಿರುವಂಥ ಸಂಪನ್ಮೂಲ ಸಾಧನಗಳನ್ನು ಆಡಳಿತ ನಡೆಸುವಂಥವರು ಎಷ್ಟರಮಟ್ಟಿಗೆ ಉಪಯೋಗ ಮಾಡಿಕೊಳ್ಳುತ್ತಾರೆ. ಯಾವ ಆಧಾರದ ಮೇಲೆ ಜನತೆಗೆ ಬೇಕಾದ ಕನಿಷ್ಠ ಸವಲತ್ತುಗಳನ್ನು ಒದಗಿಸುವ ಕಡೆ ಸಮರ್ಪಕವಾದ ಕೆಲಸವನ್ನು ಮಾಡುವುದಕ್ಕೆ, ಅವರ ಜೀವನಮಟ್ಟವನ್ನು ಸುಧಾರಿಸುವುದಕ್ಕೆ ಸಾಧ್ಯವಾಗುತ್ತದೆ, ಎಲ್ಲಿಯವರೆಗೆ ಈ ರೀತಿಯಲ್ಲಿ ವಾಸ ಮಾಡುವಂಥ ಜನರಿಗೆ ಉದ್ಯೋಗ ಒದಗಿಸಿಕೊಡುವಂಥ, ಅವರು ಗೌರವದಿಂದ ಜೀವನ ಮಾಡುವಂಥ ಕಡೆ ವ್ಯವಸ್ಥೆ ಮಾಡುವುದರ ಕಡೆ ಗಮನ ಕೊಡುವುದಿಲ್ಲ, ಅಭಿವೃದ್ಧಿಯಕಾರ್ಯಕ್ರಮ ರೂಪಿಸುವ ಕಡೆ ಸರ್ಕಾರ ಗಮನಕೊಡುವುದಿಲ್ಲ, ಅಲ್ಲಿಯವರೆಗೆ ಜನರ ಅಭಿವೃದ್ಧಿ ಆ ರಾಜ್ಯದ ಅಭಿವೃದ್ಧಿ ಆಗುವುದಕ್ಕೆ ಸಾಧ್ಯವಿಲ್ಲ. ತಮಗೆ ಗೊತ್ತಿರಬಹುದು, ನಮ್ಮ ರಾಜ್ಯದಲ್ಲಿ ಅತ್ಯಂತ ಪ್ರಮುಖವಾದ ಆದಾಯಮೂಲ ಮಾರಾಟ ತೆರಿಗೆ. ಈ ವರ್ಷ, ಈ ಮಾರಾಟ ತೆರಿಗೆಯಿಂದ ನಾವು ಅಂದಾಜು ಮಾಡಿದುದಕ್ಕಿಂತ ಸುಮಾರು ಆರುನೂರು ಕೋಟಿ ರೂಪಾಯಿಗಳಿಗೂ ಹೆಚ್ಚಿಗೆ ಆದಾಯ ಬಂದಿದೆ. ಈ ಮಾರಾಟ ತೆರಿಗೆ, ಅಬಕಾರಿ ತೆರಿಗೆ, ವಾಹನ ತೆರಿಗೆ. ಈ ಮೂರು ರಾಜ್ಯದ ಪ್ರಮುಕವಾದ ಆದಾಯ ಮೂಲಗಳು. ಇವತ್ತು ತೆರಿಗೆಗಳು ಸೋರಿ ಹೋಗದಂತೆ ಸರಿಯಾದ ರೀತಿಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದರೆ, ಕನಿಷ್ಠ ಒಂದೂವರೆ ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚಿಗೆ ಆದಾಯವನ್ನು ಸರ್ಕಾರದ ಬೊಕ್ಕಸಕ್ಕೆ ತರುವುದಕ್ಕೆ ಸಾಧ್ಯವಿದೆ. ಈ ರೀತಿ ತೆರಿಗೆಗಳು ಸೋರಿ ಹೋಗದಂತೆ ತಪ್ಪಿಸಿ,ಸರ್ಕಾರದ ಬೊಕ್ಕಸಕ್ಕೆ ತುಂಬುವಂಥ ಪ್ರಯತ್ನ ಮಾಡಿದರೆ, ಪ್ರತಿ ವರ್ಷ ಕೃಷ್ಣಕಾವೇರಿ

ಜಲಾನಯನ ಪ್ರದೇಶಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ, ವಿದ್ಯುತ್ ಉತ್ಪಾದನೆ ಕಡೆಗೆ ವಿಶೇಷವಾದ ಹಣ ತೊಡಗಿಸುವುದಕ್ಕೆ ಸಾಧ್ಯವಿದೆ.

ಈ ರೀತಿಯ ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನು ತೊಡಗಿಸುವುದಕ್ಕೆ ಸಾಧ್ಯವಿದೆ. ಆದರೆ ಈ ದಿಕ್ಕಿನಲ್ಲಿ ಸರ್ಕಾರ ವಿಶೇಷವಾಗಿ, ಯಾವುದೇ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಾ ಇಲ್ಲ. ನಮ್ಮ ರಾಜ್ಯ ಬಹುಶಃ ಕೃಷಿಯನ್ನು ಅವಲಂಬಿಸಿರತಕ್ಕ ರಾಜ್ಯ. ಜನಸಂಖ್ಯೆಯಲ್ಲಿ ಶೇಕಡ 68 ರಷ್ಟು ಜನ ಈಗಲೂ ಗ್ರಾಮೀಣ ವಲಯದಲ್ಲಿ, ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಮೀನುಗಾರಿಕೆ, ನೇಕಾರ ವೃತ್ತಿಗಳಲ್ಲಿ ತೊಡಗಿದ್ದಾರೆ. ಆದರೆ, ಅವರ ಅಭಿವೃದ್ಧಿಗೋಸ್ಕರ, ಗ್ರಾಮೀಣ ಜನರ ಅಭಿವೃದ್ಧಿಗೋಸ್ಕರ ಯಾವುದೇ ವಿಶೇಷವಾದ ಕಾರ್ಯಕ್ರಮವನ್ನು ರೂಪಿಸಿ, ಅವರ ಜೀವನ ಮಟ್ಟ ಸುಧಾರಿಸಿ, ಅವರು ಗೌರವದಿಂದ ಜೀವನ ಮಾಡುವಂಥ ವ್ಯವಸ್ಥೆಯನ್ನು ಮಾಡುವಂಥ ಪ್ರಯತ್ನ ಈ ಸರ್ಕಾರದ ಕಡೆಯಿಂದ ಆಗಿಲ್ಲ. ಬಹುಶಃ ದೈವಿಕವಾದಂಥ ಅನುಕೂಲ, ಕೃಷ್ಣಾ ಮತ್ತು ಕಾವೇರಿ, ಈ ಎರಡು ಪ್ರಮುಖ ನದಿ ಜಾಲಗಳು ಏನಿವೆ, ಇವುಗಳ ನೀರಾವರಿ ಈ ಒಂದು ರಾಜ್ಯದ ಅಭಿವೃದ್ಧಿಗೆ ದೊಡ್ಡ ಕೊಡುಗೆ. ಆದರೆ ಇದನ್ನು ಉಪಯೋಗಿಸಿಕೊಳ್ಳುವಂಥ ಪ್ರಾಮಾಣಿಕ ಪ್ರಯತ್ನ ಇದುವರೆಗೂ ಆಗಿಲ್ಲ. ನಿಜ, ಅನೇಕ ಅಣೆಕಟ್ಟುಗಳನ್ನು ನಾವು ಕಟ್ಟಿರಬಹುದು, ಜಲಾಶಯಗಳಿಗೆ ಬರುವಂಥ ನೀರನ್ನು ಒಂದು ಕಡೆ ನಿಲ್ಲಿಸುವಂಥ ಪ್ರಯತ್ನ ಮಾಡಿರಬಹುದು. ಸನ್ಮಾನ್ಯ ಮಾಡಿ ಮುಖ್ಯಮಂತ್ರಿಗಳಾದ ವೀರೇಂದ್ರ ಪಾಟೀಲರು ನಿನ್ನೆ ಒಂದು ಸೂಕ್ಷ್ಮವಾದ ಸಂಗತಿಯನ್ನು ಹೇಳುತ್ತಿದ್ದರು. ನಾವು ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟಿ, ನೀರನ್ನು ಸ್ಟಾಕ್ ಮಾಡಿದ ತಕ್ಷಣ ನಮಗೆ ಆ ಹಕ್ಕು ಬರುವುದಿಲ್ಲ. ಎಲ್ಲಿಯವರೆಗೆ ನೀರನ್ನು ಹೊಲಗದ್ದೆಗಳಿಗೆ ತಲುಪಿಸಿ, ನೀರಾವರಿ ಅಭಿವೃದ್ಧಿಗೆ ಉಪಯೋಗ ಮಾಡಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ, ನಾವು ಪ್ರಾಜೆಕ್ಟ್ ಕಟ್ಟಿದ್ದರೂ, ನಮಗೆ ನೀರಿನ ಹಕ್ಕು ಬರುವುದಕ್ಕೆ ಸಾಧ್ಯವಿಲ್ಲ. ರಾಜ್ಯದಲ್ಲಿ ಒಟ್ಟು 106 ಲಕ್ಷ ಹೆಕ್ಟೇರ್ ಕೃಷಿ ಯೋಗ್ಯವಾದ ಭೂಮಿ ಇದೆ. ಈ ಪೈಕಿ ನೀರಾವರಿ ಸಾಮರ್ಥ್ಯ ಹೊಂದಿರುವಂಥ, ನೀರನ್ನು ಒದಗಿಸಬೇಕಾದಂಥ ಭೂಮಿ ಸುಮಾರು 55 ಲಕ್ಷ ಹೆಕ್ಟೇರ್ ಮಾತ್ರ. ಇದರಲ್ಲಿ ಇದುವರೆವಿಗೂ ಸುಮಾರು 30 ಲಕ್ಷ ಹೆಕ್ಟೇರ್ ಭೂಮಿಯನ್ನು ಮಾತ್ರ ನೀರಾವರಿಗೆ ಅಳವಡಿಸುವಂಥ ಪ್ರಯತ್ನ ನಮ್ಮ ಕಡೆಯಿಂದ ಆಗಿದೆ. ಕೃಷ್ಣಾ ಮತ್ತು ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಈಗೇನು ಮಾಸ್ಟರ್‌ಪ್ಲಾನ್ ರೂಪಿಸಿದ್ದೇವೆ, ಅದರ ಪ್ರಕಾರ, ಸುಮಾರು 1686 ಟಿ.ಎಂ.ಸಿ. ನೀರು ಇದ್ದರೂ ಸಹ, ಇದುವರೆವಿಗೂ ನಾವು ಉಪಯೋಗ ಮಾಡಿರುವಂಥಾದ್ದು ಕೇವಲ 740 ಟಿ.ಎಂ.ಸಿ. ನೀರು ಮಾತ್ರ.

ಎಂದರೆ ಇನ್ನೂ ಸುಮಾರು 957 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯ ಇದ್ದರೂ ಸಹ ಕಳೆದ ಅನೇಕ ವರ್ಷಗಳಿಂದ ನಾವು ಯಾವುದಕ್ಕೆ ಆದ್ಯತೆಯನ್ನು ಕೊಡಬೇಕಾಗಿತ್ತೋ ಅದಕ್ಕೆ ಆದ್ಯತೆ ಕೊಡದೇ ಇದ್ದ ಪರಿಣಾಮವಾಗಿ ಇವತ್ತು ಈ ಒಂದು ನೀರನ್ನೂ ಸಹ ರೈತನ ಹೊಲಕ್ಕೆ ಕೊಡುವುದಕ್ಕೆ ಆಗಿಲ್ಲ, ಅವನು ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ಏನು ಅನುಕೂಲ ಮಾಡಿಕೊಡಬೇಕಾಗಿತ್ತೋ ಅದನ್ನು ಮಾಡಿಕೊಡುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡಿಲ್ಲ. ಕೃಷ್ಣಾ ಮತ್ತು ಗೋದಾವರಿ ಟ್ರಿಬ್ಯೂನಲ್ ಏನಿದೆ, ಆ ಬಚಾವತ್ ಆಯೋಗದ ತೀರ್ಪಿನಂತೆ ನಾವು ಸುಮಾರು 757 ಟಿ.ಎಂ.ಸಿ. ನೀರನ್ನು ಪೂರ್ತಿ ಬಳಸಿಕೊಳ್ಳಬೇಕಾಗಿದೆ. ಬಚಾವತ್ ಆಯೋಗದ

ಪ್ರಕಾರ ಇನ್ನೂ 757 ಟಿ.ಎಂ.ಸಿ. ನೀರನ್ನು ಇನ್ನು ಎಂಟು ವರ್ಷಗಳ ಒಳಗಾಗಿ ಪೂರ್ಣವಾಗಿ ಉಪಯೋಗಮಾಡಿಕೊಳ್ಳುವಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡದೇ ಇದ್ದರೆ ಈ ಒಂದು 757 ಟಿ.ಎಂ.ಸಿ. ನೀರಿನ ಹಕ್ಕನ್ನು ಸಹ ನಾವು ಕಳೆದುಕೊಳ್ಳಬೇಕಾಗುತ್ತದೆ. ಮುಂದೆ ಲಭ್ಯವಾಗುವಂತಹ ಎಕ್ಸೆಸ್ 399 ಟಿ.ಎಂ.ಸಿ ನೀರು ಏನಿದೆ ಅದನ್ನು ಉಪಯೋಗ ಮಾಡಿಕೊಳ್ಳುವ ಹಕ್ಕನ್ ನಾವು ಕಳೆದುಕೊಳ್ಳುವ ಸಂದರ್ಭ ಇದೆ. ನಾನು ನಮ್ಮ ಪಕ್ಷದ ವಿಧಾನ ಪರಿಷತ್ತಿನ ಸದಸ್ಯರನ್ನು, ಶಾಸಕರನ್ನು ಕರೆದುಕೊಂಡು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ನಡೆಯುತ್ತಿರತಕ್ಕಂಥ ಕೆಲಸ ಕಾರ್ಯಗಳನ್ನು ನೋಡಬೇಕೆಂದು ಭೀಮರಾಯನಗುಡಿಯಲ್ಲಿ ಎರಡು ತಿಂಗಳ ಹಿಂದೆ ಪ್ರವಾಸ ಮಾಡಿದೆ. ವಾಸ್ತವವಾಗಿ ಅಲ್ಲಿ ಕೆಲಸ ಕಾರ್ಯಗಳ ಪ್ರಗತಿ ಯಾವ ರೀತಿ ಆಗುತ್ತಿದೆ ಎಂಬುದನ್ನು ನೋಡುವಂಥ ಪ್ರಯತ್ನ ಮಾಡಿದಾಗ, ನಮ್ಮ ಕಡೆಯಿಂದ ಏನು ಪ್ರಾಮಾಣಿಕ ಪ್ರಯತ್ನ ಆಗಬೇಕಾಗಿತ್ತೋ ಅದು ಆಗಿಲ್ಲ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಎಂದು ಏನು ಹೇಳುತ್ತೇವೆ ಅಲ್ಲಿ ಎಷ್ಟು ನೀರಿನ ಉಪಯೋಗ ಮಾಡಿಕೊಳ್ಳಬೇಕಾಗಿತ್ತೋ ಅದರಲ್ಲಿ ಕೇವಲ 11 ಪರ್ಸೆಂಟ್ ಮಾತ್ರ ಉಪಯೋಗ ಮಾಡಿಕೊಳ್ಳುತ್ತಿದ್ದೇವೆ. ಇಡೀ ಕೃಷ್ಣಾ ಬೇಸಿನ್ ಏನಿದೆ ಇದರಲ್ಲಿ ನಾವು ಎಷ್ಟು ನೀರನ್ನು ಉಪಯೋಗ ಮಾಡಿಕೊಳ್ಳಬೇಕಾಗಿತ್ತೋ ಅದರಲ್ಲಿ ಕೇವಲ 50 ಪರ್ಸೆಂಟ್ ನೀರನ್ನು ಮಾತ್ರ ಉಪಯೋಗ ಮಾಡಿಕೊಂಡಿರಬಹುದು. ಮುಂದೆ ಬರುವಂತಹ ಎಂಟು ವರ್ಷಗಳಲ್ಲಿ ಇದನ್ನು ನಾವು ಪೂರ್ಣ ಮಾಡಬೇಕಾಗಿದೆ. ನಾನು ಇದರ ಬಗ್ಗೆ ಒಂದು ಅಂಕಿ ಅಂಶವನ್ನು ಅಲ್ಲಿ ತಿಳಿದುಕೊಳ್ಳುವ ಪ್ರಯತ್ನ ಮಾಡಿದಾಗ 1990-91ನೇ ಸಾಲಿನಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಭಾಗಕ್ಕೆ ನಾವು ಕೊಟ್ಟಿರುವ ಅಂದರೆ ಖರ್ಚು ಮಾಡಿರುವ ದುಡ್ಡು ಕೇವಲ 86 ಕೋಟಿ ರೂಪಾಯಿಗಳು ಮಾತ್ರ. ಈ ವರ್ಷ ಅಂದರೆ 1991-92ರಲ್ಲಿ ಅಲಾಟ್ ಮಾಡಿರುವುದು 110 ಕೋಟಿ ರೂಪಾಯಿಗಳು ಮಾತ್ರ. ಇದರಲ್ಲಿ ಬಹುತೇಕ ಹಣವನ್ನು ಅಲ್ಲಿ ಜಮೀನುಗಳನ್ನು ಏನು ಅಕ್ವೈರ್ ಮಾಡಿಕೊಳ್ಳುತ್ತಿದ್ದೇವೆ ಅದಕ್ಕೆ ಕಾಂಪನ್‌ಸೇಷನ್ ರೂಪದಲ್ಲಿ ಕೊಡುತ್ತಿದ್ದೇವೆ ಮತ್ತು ಸಂಬಳ ಸಾರಿಗೆ ಕೊಡುತ್ತಿದ್ದೇವೆ. ಆದರೆ ಅಭಿವೃದ್ಧಿ ಕಾರ್ಯಗಳು ಆಗಿಲ್ಲ. ಇವತ್ತು ರಾಜ್ಯಪಾಲರ ಭಾಷಣದಲ್ಲಿ ಎಲ್ಲೂ ಸಹ ಸ್ಪಷ್ಟವಾಗಿ, ಇನ್ನು ಎಂಟು ವರ್ಷಗಳಲ್ಲಿ, ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಪೂರ್ಣವಾಗಿ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಇಷ್ಟು ದುಡ್ಡು ಖರ್ಚು ಮಾಡುತ್ತೇವೆ, ನಮ್ಮ ಮುಂದಿನ ಕಾರ್ಯಕ್ರಮಗಳು ಆ ರೀತಿ ಇವೆ ಎಂದು ಯಾವುದೂ ಸ್ಪಷ್ಟವಾಗಿಲ್ಲ. ಅದಕ್ಕೋಸ್ಕರ ನಾನು ಸರಕಾರವನ್ನು ಒತ್ತಾಯ ಮಾಡುವುದು ಏನೆಂದರೆ, ಕಾವೇರಿ ಮತ್ತು ಕೃಷ್ಣಾ ಬೇಸಿನ್‌ನಲ್ಲಿ ಎಷ್ಟು ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅನುಕೂಲತೆಗಳು ಇವೆ ಇದುವರೆಗೆ ಏನು ವ್ಯವಸ್ಥೆ ಮಾಡಿಕೊಂಡಿದ್ದೇವೆ, ಮುಂದೆ ಪೂರ್ಣ ಮಾಡಿಕೊಳ್ಳುವುದಕ್ಕೆ ಏನು ಯೋಚನೆ ಇದೆ, ಇದರ ಬಗ್ಗೆ ಒಂದು ವೈಟ್ ಪೇಪರ್ ಹೊರಡಿಸಬೇಕೆಂದು ನಾನು ಒಂದು ಡಿಮ್ಯಾಂಟ್ ಮಾಡಿದ್ದೆ. ಆದರೆ ಇದುವರೆಗೆ ಸರಕಾರ ಈ ದಿಕ್ಕಿನಲ್ಲಿ ಯಾವುದೇ ಪ್ರಾಮಾಣಿಕ ಪ್ರಯತ್ನ ಮಾಡದೆ ಇರುವಂತಹ ಸಂದರ್ಭದಲ್ಲಿ ಮತ್ತೊಮ್ಮೆ ಸರಕಾರವನ್ನು ನಾನು ಒತ್ತಾಯ ಮಾಡುತ್ತೇನೆ. ದಯವಿಟ್ಟು ರೈತರ ಹಿತದೃಷ್ಟಿಯಿಂದ ಕೃಷ್ಣಾ ಮತ್ತು ಕಾವೇರಿ ಬೇಸಿನ್‌ಗೆ ಕನಿಷ್ಟ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ಬಜೆಟ್‌ನಲ್ಲಿ ತೆಗೆದಿಟ್ಟದ್ದೇ ಆದರೆ ಎಂಟು ವರ್ಷಗಳ ಒಳಗೆ ಇದನ್ನು ಪೂರ್ಣ ಮಾಡುವುದಕ್ಕೆ ಸಾಧ್ಯವಾಗುತ್ತದೆ. ತಮ್ಮ ಈಗಿರುವ ಲೆಕ್ಕದ ಅಂದಾಜಿನ ಪ್ರಕಾರವೇ ಇನ್ನೂ 5 ಸಾವಿರ ಕೋಟಿ

ರೂಪಾಯಿಗಳನ್ನು ಖರ್ಚು ಮಾಡುವುದಾದರೆ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ನಾವು ಉಪಯೋಗ ಮಾಡಿಕೊಳ್ಳಬೇಕಾಗಿರುವ ನೀರನ್ನು ಪೂರ್ಣವಾಗಿ ಉಪಯೋಗಮಾಡಿಕೊಳ್ಳುವುದಕ್ಕೆ ಸಾಧ್ಯವಾಗಬಹುದು. ಬರುವಂತಹ 7-8ವರ್ಷಗಳಲ್ಲಿ ಎರಡು ವರ್ಷ ಅಡ್ವಾನ್ಸ್ ಆಗಿ ಯೋಜನೆ ಮಾಡಿದರೂ ಸಹ ಪ್ರತಿ ವರ್ಷ 600-700 ಕೋಟಿ ರೂಪಾಯಿಗಳನ್ನು ಈ ಬೇಸಿನ್‌ನಲ್ಲಿ ಖರ್ಚು ಮಾಡಿದರೂ ಸಹ ಎರಡು ಸಾವಿರ ವರ್ಷದೊಳಗೆ ಬಚಾವತ್ ಆಯೋಗದ ತೀರ್ಪಿನ ಪ್ರಕಾರ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ.

ಕಾವೇರಿ ಬೇಸಿನ್‌ನಲ್ಲಿ ಏನು ಸಮಸ್ಯೆಯನ್ನು ನಾವು ಎದುರಿಸುತ್ತಿದ್ದೇವೆ ಅದೇ ಸಮಸ್ಯೆಯನ್ನು ಇಲ್ಲೂ ಎದುರಿಸುವ ವಿಚಿತ್ರ ಪರಿಸ್ಥಿತಿ ಬರುತ್ತದೆ, ಮುಂದಿನ ಪೀಳಿಗೆ ನಮ್ಮನ್ನು ಕ್ಷಮಿಸುವುದಿಲ್ಲ. ಅದಕ್ಕಾಗಿ ಈ ಬಗ್ಗೆ ಈಗಲಾದರೂ ಹೆಚ್ಚಿನ ಆದ್ಯತೆ ಕೊಟ್ಟು ಈ ಕೆಲಸವನ್ನು ಪೂರ್ಣ ಮಾಡುವುದರ ಕಡೆಗೆ ಸರಕಾರ ಗಮನ ಹರಿಸಬೇಕೆಂದು ಈ ಸಂದರ್ಭದಲ್ಲಿ ಸರಕಾರವನ್ನು ಒತ್ತಾಯ ಮಾಡುತ್ತೇನೆ.

ಸನ್ಮಾನ್ಯ ಅಧ್ಯಕ್ಷಣಿಯವರೇ, ನಾನು ಮಾತನಾಡುತ್ತಾ ರೈತನ ಸಾಲ ಮನ್ನಾ ಬಗ್ಗೆ ಪ್ರಸ್ತಾಪ ಮಾಡಿದೆ. ಮೊನ್ನೆ ಇದಕ್ಕೆ ಸಂಬಂಧಪಟ್ಟಂತೆ ನಮ್ಮ ಸಹಕಾರ ಸಚಿವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ರೈತನ ಸಾಲ ಮನ್ನಾ ಯೋಜನೆ ಮುಗಿದ ಅಧ್ಯಾಯ ಎಂದು ಹೇಳಿದ್ದಾರೆ. ಬಹುಶಃ ಈ ಸರಕಾರಕ್ಕೆ ನಾನು ಒಂದು ವಿಷಯವನ್ನು ಜ್ಞಾಪಕ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಸ್ವತಃಮಾನ್ಯ ಮುಖ್ಯಮಂತ್ರಿಗಳು 21 ಸೆಪ್ಟೆಂಬರ್ 91 ರಲ್ಲಿ ಎಲ್ಲಾ ಪಕ್ಷಗಳ ಮುಖಂಡರುಗಳನ್ನು ಡೆಲ್ಲಿಗೆ ಕರೆದುಕೊಂಡು ಹೋಗಿ ಪ್ರಧಾನಮಂತ್ರಿಯವರನ್ನು, ಹಣಕಾಸು ಸಚಿವರನ್ನು, ಕೃಷಿ ಸಚಿವರನ್ನೂ ಭೇಟಿ ಮಾಡಿ ನಮ್ಮೆಲ್ಲರ ಪರವಾಗಿ ಒಂದು ಮೆಮೊರಾಂಡಂನ್ನು ಕೊಟ್ಟರು. ಅದಕ್ಕೆ ನಾವೆಲ್ಲರೂ ಸಹ ಸಹಿ ಮಾಡಿ ಕೊಟ್ಟಿದ್ದೇವೆ. ಅದರಲ್ಲಿ ಸ್ವತಃ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ.

"Farmers with overdues not exceeding Rs. 10,000/- as on 2.10.89, the real target group of small and marginal farmers, have not benefited from the scheme. It has only helped the wilful defaulters and honest borrowers are at a disadvantage.

ಯಾರು ಉದ್ದೇಶಪೂರ್ವಕವಾಗಿ ಸಾಲ ಕಟ್ಟದೆ ಇರತಕ್ಕಂಥ ಒಂದು ಪ್ರಯತ್ನಮಾಡಿಕೊಂಡು ಬಂದಿದ್ದಾರೆ ಅವರಿಗೆ ಈ ಯೋಜನೆಯಿಂದ ಉಪಯೋಗವಾಗಿದೆಯೇ ಹೊರತು ನಿಜವಾದಂತಹ ಸಣ್ಣ ರೈತರಿಗೆ ಸಾಲ ಪಡೆದಂತಹವರಿಗೆ ಇದರಿಂದ ಉಪಯೋಗ ಆಗಿಲ್ಲ, ಅದಕ್ಕೋಸ್ಕರ ಈ ಷರತ್ತುಗಳನ್ನು ತೆಗೆದು ಹಾಕಿ ರೈತರ ಸಾಲಮನ್ನಾ ಯೋಜನೆ ಜಾರಿಗೆ ತರಬೇಕೆಂದು ಸ್ವತಃ ಮುಖ್ಯಮಂತ್ರಿಗಳು ನಮ್ಮನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿಸಿದರು. ಹಣಕಾಸಿನ ಸಚಿವರನ್ನು ಭೇಟಿ ಮಾಡಿಸಿದರು. ಮತ್ತೆ ಕೃಷಿ ಸಚಿವರನ್ನು ಭೇಟಿ ಮಾಡಿಸಿದರು. ಇದು ನಡೆದಿರತಕ್ಕಂಥಾದ್ದು ದಿನಾಂಕ 21 ಸೆಪ್ಟೆಂಬರ್ 1991ರಂದು. ಅಂದು ಈ ಪತ್ರವನ್ನು ಬರೆದ ಮೇಲೆ, ಮನವಿ ಕೊಟ್ಟ ಮೇಲೆ ಮತ್ತೆ ಕೇಂದ್ರ ಸರ್ಕಾರದ ಮನಸ್ಸನ್ನು ಒಲಿಸಲು ಪ್ರಯತ್ನ ಮಾಡಲಿಲ್ಲ, ಇವತ್ತು ನಮಗೆ ಸ್ಪಷ್ಟವಾಗಿದೆ. ಕೇಂದ್ರ ಸರ್ಕಾರದ ಈ ಒಂದು ರೈತರ ಸಾಲ ಮನ್ನಾ ಯೋಜನೆಗೆ ಏನು ಷರತ್ತುಗಳನ್ನು ಹಾಕಿತ್ತು ಅದನ್ನು ತೆಗೆದುಹಾಕಿ ರೈತರ ಸಾಲಮನ್ನಾ ಯೋಜನೆ ಜಾರಿಗೆ ತರುವಂತಹ

ವಿಶ್ವಾಸ ನಮಗೆ ಇಲ್ಲ, ಅದು ಸಾಧ್ಯವಿಲ್ಲವೆಂದು ನಮಗೆ ಮನದಟ್ಟಾಗಿದೆ. ಅದಕ್ಕೋಸ್ಕರ ನಾನು ಸರ್ಕಾರವನ್ನು ಆವತ್ತಿನಿಂದ ಇವತ್ತಿನವರೆಗೂ ಆಗ್ರಹ ಮಾಡುತ್ತಿರುವಂಥಾದ್ದು ಏನೆಂದರೆ, ಈ ರಾಜ್ಯದ ಜನರಿಗೆ ಈ ಆಶ್ವಾಸನೆಯನ್ನು ತಾವು ಕೊಟ್ಟಿದ್ದೀರಿ. ಮತ್ತೆ ಸಮಸ್ಯೆ ನಿಮಗೂ ಸಹ ಮನದಟ್ಟಾಗಿದೆ. ಯಾವ ಕಾರಣಕ್ಕೂ ಸಹ ಕೇಂದ್ರ ಸರ್ಕಾರದ ಷರತ್ತುಗಳಿಂದ ರೈತನ ಸಾಲ ಮನ್ನಾ ಯೋಜನೆಯನ್ನು ಜಾರಿಗೆ ತರುವುದಕ್ಕೆ ಸಾಧ್ಯವಿಲ್ಲ ಎನ್ನುವುದು ಮನದಟ್ಟಾದ ಮೇಲೂ ಸಹ ಇವತ್ತು ಈ ರೈತರು ಸಹಕಾರ ಸಂಘಗಳ ಮೂಲಕ ಏನು ಸಾಲ ಪಡೆದಿದ್ದಾರೆ ಅವರ ಹಣವನ್ನು ರಾಜ್ಯ ಸರ್ಕಾರೇ ತುಂಬುವಂತಹ ಪ್ರಯತ್ನ ಮಾಡದಿದ್ದರೆ ಬಹುಶಃ ಈ ರಾಜ್ಯದ ರೈತ ಬಡವನಾಗುತ್ತಾನೆ. ಮತ್ತೆ ಈ ಸರ್ಕಾರಕ್ಕೆ ಇನ್ನೊಂದು ಮಾತನ್ನು ನಾನು ಪದೇ ಪದೇ ಹೇಳುತ್ತಿರುವಂಥಾದ್ದು ಏನೆಂದರೆ, ಈ ರೈತನ ಸಾಲ ಮನ್ನಾ ಮಾಡತಕ್ಕಂಥಾದ್ದು ಏನಿದೆ, ಆ ಸಾಲ ಮನ್ನಾ ಮಾಡುವುದರಿಂದ ತಾವು ಕೃಷಿ ಕಾರ್ಯವನ್ನು ಅಭಿವೃದ್ಧಿ ಮಾಡುವುದಕ್ಕೆ ಶಕ್ತಿಯನ್ನು ತುಂಬಿ ಕೊಡುವುದರಮೂಲಕ ಇದು ಒಂದು ಅಭಿವೃದ್ಧಿ ಕಾರ್ಯಆಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಈ ದಿಕ್ಕಿನಲ್ಲಿ ಸರ್ಕಾರ ಇವತ್ತು ವಿಶೇಷವಾದ ಪ್ರಯತ್ನ ಮಾಡಬೇಕಾಗಿದೆ. ಕೇಂದ್ರ ಸರ್ಕಾರದ ನೀತಿಯಿಂದಾಗಿ ರಾಸಾಯನಿಕ ಗೊಬ್ಬರದ ಸಬ್ಸಿಡಿ ವಾಪಸ್ ಪಡೆದುದ್ದರಿಂದ ಇವತ್ತು ಗೊಬ್ಬರದ ಬೆಲೆ ಗಗನಕ್ಕೇರಿದೆ, ಕ್ರಿಮಿನಾಶಕಗಳನ್ನು ಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ ವಿಚಿತ್ರ ಪರಿಸ್ಥಿತಿಯಲ್ಲಿ, ಈ ಒಂದು ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಈಗ ಇರತಕ್ಕಂಥ ಮುಖ್ಯಮಂತ್ರಿ ಬಂಗಾರಪ್ಪನವರು ಅವರು ಹಿಂದೆ ಕೃಷಿ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಇದೇ ಸದನದಲ್ಲಿ ಹೇಳಿದ್ದರು. ಅವತ್ತು ಮುಖ್ಯಮಂತ್ರಿಗಳಾಗಿದ್ದಂತಹ ಶ್ರೀ ವೀರೇಂದ್ರ ಪಾಟೀಲರ ಕಾಲದಲ್ಲಿ ರೈತರಿಗೆ ಅತಿವೃಷ್ಟಿ ಆಗಿದೆ, ಬರಗಾಲಕ್ಕೆ ಸಿಕ್ಕಿ ಬೆಳೆ ನಾಶವಾಗಿದೆ, ಸಾಲ ಕೊಡುವಂತಹ ಸ್ಥಿತಿಯಲ್ಲಿ ರೈತ ಇಲ್ಲ, ಆದ್ದರಿಂದ ಯಾವುದೇ ಷರತ್ತು ಇಲ್ಲದೆ ರೈತರ ಸಾಲ ಮನ್ನಾ ಯೋಜನೆ ಜಾರಿಗೆ ತರಬೇಕು ಎನ್ನುವ ಮಾತನ್ನು ಸ್ವತಃ ಕೃಷಿ ಸಚಿವರಾಗಿದ್ದ ಈಗ ಮುಖ್ಯಮಂತ್ರಿಗಳಾಗಿರುವ ಬಂಗಾರಪ್ಪನವರು ಹೇಳಿದ್ದರು. ಶ್ರೀಮಾನ್ ವೀರೇಂದ್ರಪಾಟೀಲರುಮುಖ್ಯಮಂತ್ರಿಗಳಾಗಿದ್ದಾಗ ಈ ಸದನದ ಒಳಗಡೆ ಬಂದ ತಕ್ಷಣ ಅವತ್ತು ನಾವು ಹೋರಾಟ ಮಾಡಿದ ಮೇಲೆ ಈ ಸಾಲ ವಸೂಲಾತಿಯನ್ನು ತಡೆ ಹಿಡಿದಿದ್ದೇವೆ ಎಂದು ಹೇಳಿದರು.

ಅಂದಿನ ಒಂದು ಅಧಿವೇಶನದಲ್ಲಿ ಅಧಿಕಾರಿಗಳು ಬಲತ್ಕಾರವಾಗಿ ಸಾಲ ವಸೂಲಿ ಮಾಡುತ್ತಿದ್ದಾರೆಂದು ಹೇಳಿದಾಗ, ಸಾಲ ವಸೂಲಾತಿಗೆ ತಡೆಯಾಜ್ಞೆ ಮೂಲಕ ತಡೆ ಕೊಟ್ಟು ಯಾವುದೇ ಬಲಾತ್ಕಾರದಿಂದ ವಸೂಲಿ ಮಾಡದಂತೆ ನಾನು ಇವತ್ತೇ ಆದೇಶ ಹೊರಡಿಸುತ್ತೇನೆಂದು ಸ್ವತಃ ಮುಖ್ಯಮಂತ್ರಿಗಳು ಈ ಸದನದ ಒಳಗಡೆ ಹೇಳಿದರು. ಅದನ್ನು ಇಲ್ಲಿ ಹೇಳಿದ ಮೇಲೂ ಸಹ ಸರ್ಕಾರ ಈ ಬಗ್ಗೆ ಯಾವುದೇ ಒಂದು ಸಮಸ್ಯೆಯನ್ನು ಬಗೆಹರಿಸುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡಿಲ್ಲ. ನಾನು ಅನೇಕ ಬಾರಿ ಒತ್ತಾಯ ಮಾಡಿದ್ದೇನೆ. ಭಾರತೀಯ ಜನತಾ ಪಾರ್ಟಿ ಆಶ್ವಾಸನೆ ಕೊಟ್ಟಂತೆ ಮಧ್ಯ ಪ್ರದೇಶ ಸರ್ಕಾರ ಇದನ್ನು ಜಾರಿಗೆ ತಂದಿದೆ. ಆ ಸರ್ಕಾರಿ ಆಜ್ಞೆ ಇದ್ದರೆ ನಮಗೆ ಕಳುಹಿಸಿಕೊಡಿ ಎಂದು ನೀವು ಹೇಳಿರತಕ್ಕಂಥ ಮಾತಿನಲ್ಲಿ ಸತ್ಯ ಇಲ್ಲ, ಈ ಮಾತನ್ನು ಹೇಳಿದರು. ಮಧ್ಯ ಪ್ರದೇಸ ಸರ್ಕಾರ ಈ ಸಾಲ ಮನ್ನಾ ಯೋಜನೆಯನ್ನು ಯಾವುದೇ ಷರತ್ತು ಇಲ್ಲದೆ ಜಾರಿಗೆ ತಂದು 30 ಲಕ್ಷ 54 ಸಾವಿರ ಕುಟುಂಬಗಳಿಗೆ

555 ಕೋಟಿ ರೂಪಾಯಿಗಳು ಸಾಲ ಮನ್ನಾ ಮಾಡಿರುವ ಬಗ್ಗೆ ಸರ್ಕಾರಿ ಆಜ್ಞೆಯನ್ನು ನಾನು ಸಂಬಂಧಪಟ್ಟ ಸಚಿವರಿಗೆ ಕಳುಹಿಸಿದ್ದೇನೆ. ಈಗಲೂ ಸಹ ಅದರ ಪ್ರತಿ ನನ್ನಲ್ಲಿ ಇದೆ. ಅದನ್ನು ನಾನು ಕಳುಹಿಸಿಕೊಡುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಮಧ್ಯಪ್ರದೇಶದಲ್ಲಿ ಭಾರತೀಯ ಜನತಾ ಪಾರ್ಟಿ ಅಧಿಕಾರದಲ್ಲಿ ಇರುವಂತಹ ಸರ್ಕಾರ ರೈತರ ಸಾಲ ಮನ್ನಾ ಯೋಜನೆ ಜಾರಿಗೆ ತಂದಿದೆ.

ಶ್ರೀ ಕೆ. ಸೋಮಪ್ಪ ಸುವರ್ಣ : ನೀವು ಹೇಳುವಂತಹ ಯೋಜನೆ ರಾಜಸ್ಥಾನದಲ್ಲಿ ಈಗ ಇಲ್ಲ; ಈಗ ರದ್ದಾಗಿದೆ. ನಾನು ರಾಜಸ್ಥಾನದವರನ್ನು ಕೇಳಿದೆ, ಈ ಯೋಜನೆಯನ್ನು ಕೇಂದ್ರ ಸರ್ಕಾರ ಮುಕ್ತಾಯ ಮಾಡಿದ ಕೂಡಲೇ ಇಲ್ಲೂ ಸಹ ರದ್ದಾಯಿತು ಎಂದು ಅವರು ಹೇಳಿದರು. ಆದರೆ ಇವರು ಹಿಂದಿನ ಕಥೆಯನ್ನು ಈಗಲೂ ಹೇಳುತ್ತಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಕಳೆದ ಅಧಿವೇಶನದಲ್ಲಿ ಮಾನ್ಯ ಯಡಿಯೂರಪ್ಪನವರು ಇದೇ ರೀತಿಯಾದಂತಹ ವಾದವನ್ನು ಮಾಡುವಂತಹ ಸಂದರ್ಭದಲ್ಲಿ ಮಾನ್ಯ ರೈತ ಸಂಘದ ಮುಖಂಡ ಪ್ರೊ: ನಂಜುಂಡಸ್ವಾಮಿಯವರು ಮಧ್ಯಪ್ರದೇಶ ಸರ್ಕಾರ ಯಾವುದೇ ತರಹದ ರೈತನ ಸಾಲ ಮನ್ನಾ ಮಾಡಿಲ್ಲವೆಂದು ಈ ಸಭೆಯಲ್ಲಿ ಸ್ಪಷ್ಟಮಾಡಿದರು. ಈಗ ಆ ಬಗ್ಗೆ ತಮ್ಮಲ್ಲಿ ಜಿ.ಓ. ಏನಾದರೂ ಇದ್ದರೆ ಅದನ್ನು ಸಾಬೀತು ಮಾಡಲು ದಯಮಾಡಿ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೇ, ನಾನು ಇಷ್ಟು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಮಧ್ಯಪ್ರದೇಶದಲ್ಲಿ ಯಾವುದೇ ಷರತ್ತಿಲ್ಲದೆ, ಅಂದರೆ ಕೇಂದ್ರ ಸರ್ಕಾರದವರು ರೈತರ ಸಾಲ ಮನ್ನಾ ಯೋಜನೆಗೆ ಏನು ಷರತ್ತುಗಳನ್ನು ಹಾಕಿದ್ದರೋ ಆ ಷರತ್ತುಗಳನ್ನು ತೆಗೆದುಹಾಕಿ ಸುಮಾರು 555 ಕೋಟಿ 20 ಲಕ್ಷ ರೂಪಾಯಿಗಳಷ್ಟು ಸಾಲ ಮನ್ನಾ ಮಾಡಿದ್ದಾರೆ. ಇದರ ವ್ಯಾಪ್ತಿಗೆ ಎಷ್ಟು ಕುಟುಂಬಗಳು ಬರುತ್ತವೆ ಎಂದರೆ, 30 ಲಕ್ಷದ 50 ಸಾವಿರ ಕುಟುಂಬಗಳು. ಅದರ ಬಗ್ಗೆ ಸನ್ಮಾನ್ಯ ಸಚಿವರಾದಂಥ ವೀರಪ್ಪ ಮೋಯಿಲಿಯವರಿಗೆ ಅದರ ಕಾಪಿಯನ್ನು ಕಳುಹಿಸಿಕೊಡುತ್ತೇನೆ. ಇವತ್ತು ಮಧ್ಯಪ್ರದೇಶ ಸರ್ಕಾರ ತನ್ನ ಜವಾಬ್ದಾರಿಯನ್ನು ತಾನೇ ವಹಿಸಿಕೊಂಡು ತನ್ನ ಸರ್ಕಾರದ ಬೊಕ್ಕಸದಿಂದ ಯಾವುದೇ ಷರತಿಲ್ಲದೆ ರೈತರ ಸಾಲ ಮನ್ನಾ ಮಾಡಿದೆ. ನಮ್ಮ ರಾಜ್ಯದಲ್ಲಿ ರೈತರ ಸಾಲಮನ್ನಾ ಮಾಡಿದರೆ 300 ಕೋಟಿ ರೂಪಾಯಿಗಳು ಆಗಬಹುದು. ಅದೇ ರೀತಿ ಸಾಲ ಮನ್ನಾ ಯೋಜನೆಯನ್ನು ನಮ್ಮ ರಾಜ್ಯದಲ್ಲೂ ಜಾರಿಗೆ ತರಬೇಕೆಂದು ನಾವು ಒತ್ತಾಯ ಮಾಡುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಇಲ್ಲಿ ಬಹಳ ಪ್ರಾಮುಖ್ಯವಾದ ಸಂಗತಿ ಎಂದರೆ, ಒಂದುಕಡೆ ರೈತರ ಸಾಲ ಮನ್ನಾ ಯೋಜನೆಯನ್ನು ಜಾರಿಗೆ ತರುತ್ತೇವೆಂದು ಆಶ್ವಾಸನೆ ಕೊಟ್ಟು, ಮತ್ತೊಂದು ಕಡೆ ಪೋಲೀಸ್‌ಅಧಿಕಾರಿಗಳನ್ನು ಉಪಯೋಗ ಮಾಡಿಕೊಂಡು ಸಾಲವಸೂಲಾತಿ ಮಾಡುವಂಥ ಕೆಲಸವನ್ನು ಸರ್ಕಾರ ಮಾಡುತ್ತಿದೆ.

ಮೊನ್ನೆ ಒಂದು ಸರ್ಕಾರಿ ಆಜ್ಞೆಯ್ನು ತಾವು ಹೊರಡಿಸಿದ್ದೀರಿ. 16 ನವೆಂಬರ್ 1991ರಲ್ಲಿ ಇದರ ಪ್ರಕಾರ, ಯಾವ ರೈತ ದಿನಾಂಕ 31-3-92ರೊಳಗೆ ತಾನು ಪಡೆದಿರುವಂಥ ಸಾಲದ ಅಸಲು ಮತ್ತು ಬಡ್ಡಿಯನ್ನು ಸಂಪೂರ್ಣವಾಗಿ ಕಟ್ಟುತ್ತಾನೋ ಅವನಿಗೆ ಕನ್‌ಸೆಷನ್ ಎಂದು ಹೇಳಿ, ಶೇಕಡಾ 5 ಭಾಗ ಬಡ್ಡಿಯನ್ನು ಮನ್ನಾ ಮಾಡುತ್ತೇವೆ ಎಂಬ ಆಶ್ವಾಸನೆಯನ್ನು ಈ ಸರ್ಕಾರದ ಆಜ್ಞೆ ಮೂಲಕ ಕಳುಹಿಸಿದ್ದೀರಿ. ಇದರ ಪ್ರಕಾರ ಯಾರು ಅಸಲು ಮತ್ತು ಬಡ್ಡಿಯನ್ನು ಪಾವತಿ

ಮಾಡುತ್ತಾರೋ ಅವರಿಗೆ 5 ಪರ್ಸೆಂಟ್ ಕನ್‌ಸೆಷನನ್ನು ಅವರು ಪಾವತಿ ಮಾಡಿದ 10 ದಿವಸಗಳೊಳಗೆ ಪಾವತಿ ಮಾಡುತ್ತೇವೆ ಎಂದು ಭರವಸೆ ಕೊಟ್ಟಿದ್ದೀರಿ. ಇಡೀ ರಾಜ್ಯದಲ್ಲಿ ಕೆಲವು ಭಾಗದಷ್ಟು ರೈತರು ಅಂದರೆ ಶಕ್ತಿ ಇರುವಂಥವರು ಈ ಸಾಲವನ್ನು ಕಟ್ಟಿರಬಹುದು. ತಮ್ಮ ಮೂಲಕ ನಾನು ಸರ್ಕಾರವನ್ನು ಕೇಳಲಿಕ್ಕೆ ಇಚ್ಛಪಡುತ್ತೇನೆ. ಇದುವರೆಗೂ ಇಡೀ ರಾಜ್ಯದಲ್ಲಿ ಸಾಲ ಪಾವತಿ ಮಾಡಿದಂಥ ಜನರಿಗೆ 10 ದಿವಸಗಳೊಳಗೆ 5 ಪರ್ಸೆಂಟ್ ಬಡ್ಡಿ ರಿಯಾಯಿತಿಯನ್ನು ಕೊಡುತ್ತೇವೆಂದು ಹೇಳಿದ್ದರಲ್ಲ ಅದರಂತೆ ಒಂದು ರೂಪಾಯಿಯನ್ನೂ ಸಹ ಇದುವರೆಗೂ ಕೊಟ್ಟಿಲ್ಲ. ಮೊದಲನೆಯದು, ಈ ರಾಜ್ಯದ ರೈತ ಸಮೂಹ ನಿಮ್ಮನ್ನು ಭಿಕ್ಷೆ ಕೇಳಿರಲಿಲ್ಲ, ಎಂದೂ ಸಾಲ ಮನ್ನಾ ಮಾಡಿ ಎಂದು ಕೇಳಿರಲಿಲ್ಲ. ರಾಜಕೀಯ ಮುಖಂಡರುಗಳು, 2 ವರ್ಷದ ಹಿಂದೆ ನಡೆದ ಲೋಕಸಭಾ ಚುನಾವಣೆಯಲ್ಲಿ

ನಾಡಿನ ಜನರಿಗೆ ಆಶ್ವಾಸನೆ ಕೊಟ್ಟರು. ಇದುವರೆಗೂ ರೈತನ ಅಭಿವೃದ್ಧಿಗೆ ವಿಶೇಷ ಪ್ರಯತ್ನ ಮಾಡಲಿಲ್ಲ ಎಂಬುದನ್ನು ಒಪ್ಪಿಕೊಂಡು, ಯಾವುದೂ ಷರತ್ತಿಲ್ಲದೆ ರೈತನ ಸಾಲವನ್ನು ಮನ್ನಾ ಮಾಡುತ್ತೇವೆಂದು ಪ್ರಧಾನವಾಗಿ ಆಶ್ವಾಸನೆ ಕೊಟ್ಟರು. ಆವತ್ತಿನಿಂದ ಇವತ್ತಿನವರೆಗೂ ಕೆಲವು ಷರತ್ತುಗಳನ್ನು ಹಾಕಿದರೂ ಉಪಯೋಗ ಆಗಿಲ್ಲ. ಇದನ್ನು ಜಾರಿಗೆ ತರಬೇಕೆಂದು ನಾನು ಒತ್ತಾಯ ಮಾಡಿದಾಗ ಮತ್ತು ಸಾಲ ವಸೂಲಾತಿಗೆ ನೋಟೀಸ್ ಕೊಟ್ಟಿದ್ದಾರೆಂದು ನಾನು ತಿಳಿಸಿದಾಗ ಸಾಲ ವಸೂಲಾತಿಗೆ ತಡೆ ಆಜ್ಞೆಯನ್ನು ಕೊಟ್ಟು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು.

ಶ್ರೀ ಎಂ. ನಾರಾಯಣಸ್ವಾಮಿ : ಸಾಲ ಮನ್ನಾ ಮಾಡಿಲ್ಲವೆಂದು ತಾವು ಹೇಳುತ್ತೀರಿ. ರಾಮನ ಗುಡಿ ಕಟ್ಟುತ್ತೇವೆಂದು ತಾವು ಹೇಳಿದಿರಿ. ಇನ್ನೂ ಏಕೆ ಕಟ್ಟಿಲ್ಲವೆಂದು ನನ್ನ ಪ್ರಶ್ನೆ. ಈಗ ಬೇರೆ ಕಾಶ್ಮೀರಕ್ಕೆ ಏಕತಾ ಯಾತ್ರೆ ಹೋಯಿತು.

ಶ್ರೀ ಆರ್.ಎನ್. ನಾಯಕ್ : ರಾಮನ ಗುಡಿ ಕಟ್ಟುತ್ತೇವೆಂದು ಹಣ ವಸೂಲು ಮಾಡಿದ್ದರು ಅದರ ಲೆಕ್ಕ ಕೊಟ್ಟಿಲ್ಲ. ಅದನ್ನು ಸ್ವಲ್ಪ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ ; ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ರೈತರ ಸಾಲ ಮನ್ನಾ ಯೋಜನೆ ಜಾರಿಗೆ ತನ್ನಿ ಎಂದು ರಾಜ್ಯ ಸರ್ಕಾರಕ್ಕೆ ಒತ್ತಾಯ ಮಾಡುತ್ತಿರುವ ಟೈಮ್‌ನಲ್ಲಿ ರಾಮ ಮಂದಿರ ಏಕೆ ಕಟ್ಟಲಿಲ್ಲ, ಯಾವಾಗ ರಾಮ ಮಂದಿರ ಕಟ್ಟುತ್ತೀರಿ ಎಂದು ಕೇಳುತ್ತಿದ್ದಾರೆ. ರಾಮ ಮಂದಿರ ಏಕೆ ಕಟ್ಟಲಿಲ್ಲವೆಂದು ಕೇಳುತ್ತಿರುವವರು, ಕರ್ನಾಟಕ ರಾಜ್ಯದ ಜನತೆಗೆ ಹಿಂದೆಸಾಲ ಮನ್ನಾ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟು, ಜನ ಹಿತ ಮರೆತು ಯಾರೋ ಅರ್ರ್ಯಾಕ್ ಜನಗಳ ಕೈ ಗೊಂಬೆಯಾಗಿ ನೀವು ಯಾವ ರೀತಿ ಕೆಲಸ ಮಾಡುತ್ತಿದ್ದೀರೆಂದು ಯೋಚನೆ ಮಾಡಿ. ಮಾನ್ಯ ಉಪಾಧ್ಯಕ್ಷಿಣಿಯವರೆ, ಇವರು ಹರಿಜನ ಬಸದಿ ಮತ್ತು ದೇವಸ್ಥಾನ ಕಟ್ಟುತ್ತೇವೆಂದು ಹೇಳಿದರು. ಅದನ್ನು ಕಟ್ಟಿದರೇನು ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ರಾಮ ಮಂದಿರವನ್ನು ಕಟ್ಟುವ ಕಡೆ ದೃಢವಾದ, ನಿಶ್ಚಯ ಮಾಡಿಕೊಂಡು ಹೊರಟಿದ್ದೇವೆ. ಆದರೆ ತಾವು ಹರಿಜನ ಬಸ್ತಿಯಲ್ಲಿ ದೇವಸ್ಥಾನಗಳನ್ನು ಕಟ್ಟುತ್ತೇವೆಂದು, ಹೇಳಿದ್ದೀರಲ್ಲ, ಕಟ್ಟಿದಿರೇನು ? ಕೊಟ್ಟಂತಹ ಆಶ್ವಾಸನೆಯನ್ನು ಪೂರ್ಣಮಾಡಿದಿರೇನು ?

ಶ್ರೀ ಜೆ.ಸಿ. ಮಾಧುಸ್ವಾಮಿ : ಆರು ತಿಂಗಳು ಟೈಮ್ ಕೊಡಿ, ಏನಾದರೂ ಮಾಡಿ ಪ್ರಾಬ್ಲಮ್ ಸಾಲ್ವ ಮಾಡೋಣ ಎಂದರೆ ಆಗುವುದಿಲ್ಲ ಎಂದು ಹೋದಿರಿ. ಈಗ ಯು.ಪಿ.ನಲ್ಲಿ ನಿಮ್ಮದೇ ಸರ್ಕಾರ ಇಟ್ಟುಕೊಂಡು ಬೇಕಾದಾಗ ಕಟ್ಟುತ್ತೇವೆಂದರೆ ಯಾವಾಗ ಕಟ್ಟುತ್ತೀರಿ? ನಾವೆಲ್ಲಾ ನಾಶವಾದ ಮೇಲೆ ಕಟ್ಟುತ್ತೀರಾ?

(ಗೊಂದಲ)

ಶ್ರೀ ಆರ್.ಎನ್. ನಾಯಕ್ : ಯು.ಪಿ.ನಲ್ಲಿ ಇದರ ಹೆಸರಿನ ಮೇಲೆ ಅಧಿಕಾರಕ್ಕೆ ಬಂದರು.

ಶ್ರೀ ವಿನಯ ಕುಮಾರ್ ಸೊರಕೆ : ದುಡ್ಡು ಏನು ಮಾಡಿದಿರಿ? ಎಲ್ಲಿ ಹೋಯಿತು? ಅದರ ಲೆಕ್ಕಾಚಾರ ಹೇಳಿ.

(ಗೊಂದಲ)

ಉಪಾಧ್ಯಕ್ಷರು : ಗವರ್ನರ್ಸ್ ಅಡ್ರೆಸ್ ಮೇಲೆ ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ರಾಮ ಮಂದಿರ ಕಟ್ಟುತ್ತೇವೆಂದು ಈ ದೇಶದ ಜನತೆಗೆ ಭರವಸೆ ಕೊಟ್ಟು ಇದೇ ಆಧಾರದ ಮೇಲೆ ಇವತ್ತು ಅಧಿಕಾರಕ್ಕೆ ಬಂದಿದ್ದೀರಿ ಎಂದು ನೀವು ಹೇಳಬಹುದು. ಮದ್ಯಪ್ರದೇಶ, ಉತ್ತರ ಪ್ರದೇಶದಲ್ಲಿ ಭಾರತೀಯ ಜನತಾ ಪಾರ್ಟಿಯ ಸರ್ಕಾರ ಇದೆ. ಅಲ್ಲಿರುವಂತಹ ಮುಖ್ಯ ಮಂತ್ರಿಯವರು ಈ ದೇಶದ ಜನತೆಗೆ ಆಶ್ವಾಸನೆ ಕೊಟ್ಟಿದ್ದಾರೆ. ಇವತ್ತು ಏನು ನಿಮ್ಮ ಕೇಂದ್ರ ಸರ್ಕಾರ ಅಧಿಕಾರದಲ್ಲಿದೆ. ಅವರು ರಾಮ ಮಂದಿರವನ್ನು ಕಟ್ಟುವುದಕ್ಕೆ ಅಡ್ಡಿ ಆತಂಕಗಳನ್ನು ಮಾಡುತ್ತಿದ್ದಾರೆ. ಆ ರೀತಿ ಅಡ್ಡಿ ಆತಂಕಗಳನ್ನು ಮಾಡದಂತೆ ನೋಡಿಕೊಳ್ಳಿ. ನಿಜವಾಗಿ ರಾಮ ಮಂದಿರವನ್ನು ಕಟ್ಟಬೇಕೆಂದು ನಮ್ಮ ಕಾಂಗ್ರೆಸ್ ಸ್ನೇಹಿತರಿಗೆ ಕಳಕಳಿ ಇದ್ದರೆ ಈ ಕೆಲಸ ಮಾಡಿ.

(ಗೊಂದಲ)

ಉಪಾಧ್ಯಕ್ಷರು : ದಯುವಿಟ್ಟು ಗವರ್ನರ್ ಅಡ್ರೆಸ್ ಮೇಲೆ ಮಾತನಾಡಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ರಾಮ ಮಂದಿರಕ್ಕೆ ಒಂದು ಕಾಂಪೌಂಡ್ ಹಾಕುತ್ತೇವೆಂದು ಅಲ್ಲಿನ ಮುಖ್ಯ ಮಂತ್ರಿಗಳು ಹೇಳಿದ್ದಾರೆ ಅಷ್ಟೆ.

(ಗೊಂದಲ)

ಶ್ರೀ ಆರ್.ಎನ್. ನಾಯಕ್ : ದೇವರು ದುಡ್ಡು ತಿಂದಿದ್ದೀರಲ್ಲ, ಲೆಕ್ಕ ಕೊಟ್ಟು ನಿಮಗೆ ಅಭ್ಯಾಸ ಇಲ್ಲ, ಲೆಕ್ಕಾಚಾರ ಎಲ್ಲಿ?

(ಗೊಂದಲ)

ಶ್ರೀ ಎಂ. ನಾರಾಯಣ ಸ್ವಾಮಿ : ಉತ್ತರ ಪ್ರದೇಶದಲ್ಲಿ ಇವರ ಸರ್ಕಾರ ಬಂದು ಸುಮಾರು 11 ತಿಂಗಳಾದರೂ ಬರುತ್ತಿದೆ. ನಾಳೆ ಮೇಗೆ ಒಂದು ವರ್ಷ ಆಗುತ್ತದೆ. ಇವತ್ತು ಅದರ ಬಗ್ಗೆ ಇನ್ನೂ ಚಕಾರವೇ ಇಲ್ಲ.

(ಗೊಂದಲ)

ಉಪಾಧ್ಯಕ್ಷರು : ಅವರು ಈಲ್ಡ್ ಆಗಿಲ್ಲ, ದಯಮಾಡಿ ಕುಳಿತುಕೊಳ್ಳಿ

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏತಕ್ಕೋಸ್ಕರ ಯೀಲ್ಡ್ ಆಗಿ ಕುಳಿತುಕೊಂಡೆ ಅಂದರೆ, ರಾಮನ ಮಂದಿರವನ್ನು ಕಟ್ಟುತ್ತೇವೆಂದು ಹೇಳಿದಾಗ ವಿರೋಧ ಮಾಡಿದರು. ಕೊನೆಯ ಪಕ್ಷ ಇವತ್ತು ರಾಮನ ಹೆಸರನ್ನು ಸ್ಮರಣೆ

ಮಾಡುವಂತಹ ಅವಕಾಶ ಸಿಕ್ಕಿದೆಯಲ್ಲಾ, ಸ್ಮರಣೆ ಮಾಡಲಿ ಎಂದು ನಾನು ಕುಳಿತುಕೊಂಡೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ದೇಶದ ಜನತೆಗೆ ಭಾರತೀಯ ಜನತಾ ಪಾರ್ಟಿಯವರು ಚುನಾವಣಾ ಪ್ರಣಾಳಿಕೆಯಲ್ಲಿ ಏನು ಆಶ್ವಾಸನೆಯನ್ನು ಕೊಟ್ಟಿದ್ದೇವೆ, ಅದನ್ನು ನಿಶ್ಚಯವಾಗಿ ಈಡೇರಿಸುತ್ತೇವೆ. ನಾವು ಅಧಿಕಾರದಲ್ಲಿರುವಂತಹ ನಾಲ್ಕು ರಾಜ್ಯಗಳಲ್ಲಿ ಇರಬಹುದು. ಇಡೀ ದೇಶದ ಜನತೆಗೆ ಅನೇಕ ಆಶ್ವಾಸನೆಗಳನ್ನು ಏನು ಕೊಟ್ಟಿದ್ದೇವೆ ಅದನ್ನು ಈಡೇರಿಸುವಂತಹ ಕಾಲ ಬಹಳ ಹತ್ತಿರ ಬರುತ್ತಿದೆ. ಅದನ್ನು ತಾವು ನೋಡುತ್ತೀರಿ, ಅಲ್ಲಿಯವರೆಗೂ ಕಾದು ನೋಡಿ.

(ಗೊಂದಲ)

ಉಪಾಧ್ಯಕ್ಷರು : ತಾವು ಗವರ್ನರ್ಸ್ ಅಡ್ರೆಸ್ ಮೇಲೆ ಮಾತನಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ; ನೆಕ್ಸ್ಟ್ ಎಲೆಕ್ಷನ್ ಆಗುವವರೆ ಮಾಡಿ..

ಶ್ರೀ ಬಿ.ಎಸ್. ಯಡಿಯೂರಪ್ಪ : ರಾಮ ಮಂದಿರ ಕಟ್ಟಬೇಡಿ ಎಂದು ಹೇಳಿದ ಪರಿಣಾಮ ಏನು ಆಯಿತು? ಇವತ್ತು ಭಾರತೀಯ ಜನತಾ ಪಾರ್ಟಿ..

(ಗೊಂದಲ)

ಶ್ರೀ ಎಂ. ನಾರಾಯಣಸ್ವಾಮಿ : ಹಣೆ ಬರಹ ಪಂಜಾಬ್‌ನಲ್ಲಿ ನೋಡಲಿ.

ಉಪಾಧ್ಯಕ್ಷರು : ಯಡಿಯೂರಪ್ಪನವರು ಯೀಲ್ಡ್ ಆಗಿಲ್ಲ, ದಯಮಾಡಿ ತಾವು ಕುಳಿತುಕೊಳ್ಳಿ. ತಾವು ಗವರ್ನರ್ಸ್ ಅಡ್ರೆಸ್ ಮೇಲೆ ಚರ್ಚೆ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಸರ್ಕಾರವನ್ನು ಕೇಳುವುದಕ್ಕೆ ಇಚ್ಛೆಪಡುವಂತಹದು ಏನು ಎಂದರೆ, ಈ ರಾಜ್ಯದ ರೈತನ, ನೇಕಾರನ, ಮೀನುಗಾರನ, ಕೃಷಿಕಾರ್ಮಿಕರ, 10 ಸಾವಿರ ರೂಪಾಯಿಗಳವರೆಗಿನ ಸಾಲ ಮನ್ನಾ ಮಾಡಿ ಆಗಿದೆ ಎನ್ನುವಂತಹ ಭರವಸೆಯನ್ನು ಮೊನ್ನೆ ನಡೆದಂತಹ ಲೋಕಸಭಾ ಚುನಾವಣೆ ಸಮಯದಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ರಾಜ್ಯದ ಉದ್ದಗಲಕ್ಕೂ ಹೋದಾಗಲೆಲ್ಲಾ ಹೇಳಲಿಲ್ಲವೇ? ಯಡಿಯೂರಪ್ಪನವರು ವಿಧಾನ ಸಭೆಯಲ್ಲಿ ಸಾಲ ವಸೂಲಿ ಮಾಡುತ್ತಿದ್ದಾರೆ, ಇದಕ್ಕೆ ತಡೆ ಆಜ್ಞೆ ಕೊಡಬೇಕೆಂದು ಒತ್ತಾಯ ಮಾಡಿದಾಗ ಸಾಲದ ಆಜ್ಞೆಗೆ ತಡೆ ಕೊಡಲಿಲ್ಲವೇ? ಯಾವ ಸಾಲ ವಸೂಲಿ ಮಾಡುವುದಕ್ಕೋಸ್ಕರ ಇವರು ನೋಟೀಸ್ ಕೊಟ್ಟಿದ್ದಾರೆ ಎಂದು ಹೇಳಿದರೆ ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ನಿಮ್ಮ ಮುಖ್ಯಮಂತ್ರಿಗಳು ಹೇಳಲಿಲ್ಲವೇ?

ಡಾ. ವೈ. ನಾಗಪ್ಪ : ಅವರು ಹಾಗೆ ಹೇಳಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಎಲ್ಲಾ ಮುಖಂಡರನ್ನು ದೆಹಲಿಗೆ ಕರೆದುಕೊಂಡು ಹೋಗಿ ಕೇಂದ್ರ ಸರ್ಕಾರ ರೈತರ ಸಾಲ ಮನ್ನಾ ಯೋಜನೆಯಲ್ಲಿ ಏನು ಷರತ್ತುಗಳನ್ನು ಹಾಕಿದೆ, ಅದರಿಂದ ರೈತ ಸಮುದಾಯಕ್ಕೆ ಅನುಕೂಲ ಆಗುವುದಿಲ್ಲ, ಸಾಲಮನ್ನಾ ಮಾಡುವಂತಹ ಅಗತ್ಯ ಇದೆ ಆದ್ದರಿಂದ ಆ ಶರತ್ತುಗಳನ್ನು ತೆಗೆದು ಹಾಕಿ ಎಂದು ಈ ರಾಜ್ಯದ ಮುಖ್ಯಮಂತ್ರಿಗಳು, ನಾವೆಲ್ಲಾಒಟ್ಟಿಗೆ ಹೋಗಿ ಕೇಳಲಿಲ್ಲವೇ? ಅಂದರೆ ನೀವು ಈ ರೈತರ ಸಾಲ

ಮನ್ನಾ ಮಾಡುವಂತಹ ಅಗತ್ಯ ಇದೆ ಎಂದುಒಪ್ಪಿಕೊಂಡ ಮೇಲೆ ಕೇಂದ್ರ ಸರ್ಕಾರದ ಮನಸ್ಸನ್ನು ಒಲಿಸಿ ಆಗಿದೆ. ಬೇಕಾದಂತಹ ಸಾಲವನ್ನು ತುಂಬುವುದಕ್ಕೆ ಕೇಂದ್ರ ಸರ್ಕಾರದಿಂದ ಸಾಧ್ಯ ಇಲ್ಲದೇ ಇದ್ದರೆ ನಾನು ಈ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ರಾಜ್ಯ ಸರ್ಕಾರ ಈ ಜವಾಬ್ದಾರಿಯನ್ನು ಹೊತ್ತು ರೈತರ ಸಾಲ ಮನ್ನಾ ಮಾಡಬೇಕು. ಎರಡನೆಯದು, ಮೊನ್ನೆ ಸರ್ಕಾರ ಒಂದು ಸುತ್ತೋಲೆಯನ್ನು ಹೊರಡಿಸಿ ಈ ರೈತ ಸಮುದಾಯಕ್ಕೆ ಭಿಕ್ಷೆ ಬೇಡುವ ರೀತಿಯಲ್ಲಿಅಸಲು ಬಡ್ಡಿಯನ್ನು ನಾವು ಕಟ್ಟಬೇಕಂತೆ, ಕಟ್ಟಿದ ಮೇಲೆ..

(ಗೊಂದಲ)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಸಾಲ ಮನ್ನಾ ಮಾಡುತ್ತೇವೆಂದು ಯಾರು ಹೇಳಲಿಲ್ಲ.

(ಗೊಂದಲ)

ಉಪಾಧ್ಯಕ್ಷರು : ಈಗ ಅವರು ಯೀಲ್ಡ್ ಆಗಿಲ್ಲ, ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಡಾ: ವೈ. ನಾಗಪ್ಪ : ಸಾಲ ಮನ್ನಾ ಮಾಡುತ್ತೇವೆಂದು ಹೇಳಿಲ್ಲ. ಹಿಂದೆ ಜನತಾ ದಳದ ಸರ್ಕಾರದ ಇದ್ದಾಗ ಅವರು ಮಾಡಿದ್ದು. ನಮಗೂ ರೈತರ ಬಗ್ಗೆ ಕಳಕಳಿ ಇದೆ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಯಡಿಯೂರಪ್ಪನವರು ಯೀಲ್ಡ್ ಆಗಿಲ್ಲ.ನೀವು ಅವರು ಮಾತನಾಡುವುದನ್ನು ಕೇಳಬೇಕು. ಕೇಳಿ ಆದ ಮೇಲೆ ಅವರು ಒಪ್ಪಿಕೊಂಡ ಮೇಲೆ ತಾವು ಮಾತನಾಡುವುದಕ್ಕೆ ಅವಕಾಶ ಇರುತ್ತದೆ.

ಡಾ. ವೈ. ನಾಗಪ್ಪ : ಇವರು ರಾಮಮಂದಿರ ಕಟ್ಟುತ್ತೇವೆಂದು ಹೇಳಿ ಜನರಿಂದ ಸಾವಿರಾರು ಕೋಟಿ ರೂಪಾಯಿಗಳನ್ನು ಲೂಟಿ ಮಾಡಿದ್ದಾರೆ ಅದು ಎಲ್ಲಿಗೆ ಹೋಯಿತು?

ಶ್ರೀ ಬಿ.ಎಸ್. ಯಡಿಯೂರಪ್ಪ : ಯಡಿಯೂರಪ್ಪ ಎದ್ದು ಮಾತನಾಡುವಾಗ ನಿಮಗೆಲ್ಲ ಏನಾಗುತ್ತದೆ? ಏಕೆ ಎಲ್ಲರೂ ಎದ್ದು ಮಾತನಾಡಲಿಕ್ಕೆ ಪ್ರಾರಂಭಿಸುತ್ತೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಇವೊತ್ತು ಬೆಳಿಗ್ಗೆಯಿಂದ ನಾವು ಸದನದಲ್ಲಿ ನೋಡುತ್ತಾ ಇದ್ದೇವೆ ಬ್ಯಾಂಕಿಂಗ್ ಸಿಸ್ಟೆಮ್ಸ್‌ನಲ್ಲಿ ಎಕ್ಸ್‌ಪರ್ಟ್‌ಗಳಾದ ನಾಲ್ಕು ಜನರು ಎದ್ದು ನಿಂತು ಮಾತನಾಡುತ್ತಾ ಇದ್ದಾರೆ. ಅವರು ಹೇಳುವುದನ್ನು ಕೂಡ ನಾವು ಕೇಳುವುದಕ್ಕೆ ತಯಾರಾಗಿದ್ದೇವೆ. ಈಗ ತಾವು ಮಾನ್ಯ ಯಡಿಯೂರಪ್ಪನವರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಿ ಅವರು ಮಾತನಾಡುವಂತೆ ಅವಕಾಶ ಮಾಡಿಕೊಡಿ. ಆ ಎಕ್ಸ್‌ಪರ್ಟ್‌ಗಳ ಮಾತನ್ನು ನಾಳೆ ನೀವು ಅವಕಾಶ ಮಾಡಿಕೊಟ್ಟಾಗ ಕೇಳೋಣ.

ಉಪಾಧ್ಯಾಕ್ಷಿಣಿಯವರು : ಮಾನ್ಯ ಯಡಿಯೂರಪ್ಪನವರೇ ಮಾತನಾಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದೇ ರೀತಿಯಲ್ಲಿ ಮಾನ್ಯ ಸದಸ್ಯರುಗಳು ಯಡಿಯೂರಪ್ಪನವರನ್ನು ರೇಗಿಸುತ್ತಾ ಇರುವುದು, ಆಮೇಲೆ ಅವರು ಧರಣಿ

ಮಾಡುವುದು ಮುಂತಾಗಿ ಆಗುತ್ತಾ ಇದೆ. ದಯಮಾಡಿ ಮದ್ಯದಲ್ಲಿ ಎದ್ದು ನಿಂತ ಮಾತನಾಡಲು ತಾವು ದಯವಿಟ್ಟು ಅವಕಾಶ ಕೊಡಬೇಡಿ...

(ಗೊಂದಲ)

ಶ್ರೀ ಟಿ.ಎ. ಮಂಜುನಾಥ್ : ಮಾನ್ಯ ಉಫಾದ್ಯಕ್ಷಿಣಿಯವರೇ, ಮಾನ್ಯ ಹಿರಿಯ ಸದಸ್ಯರಾಗಿರತಕ್ಕಂಥ ಯಡಿಯೂರಪ್ಪನವರು ರೈತರ ಸಾಲದ ಬಗ್ಗೆ ಈ ಸಭೆಯಲ್ಲಿ ಅನೇಕ ಬಾರಿ ಪ್ರಸ್ತಾಪ ಮಾಡಿದ್ದಾರೆ. ಈಗ ತಾನೆ ಅವರು ಮಧ್ಯ ಪ್ರದೇಶದಲ್ಲಿ ರೈತರ ಸಾಲ ಎಷ್ಟೋ ಕೋಟಿ ರೂಪಾಯಿಗಳನ್ನು ವಜಾ ಮಾಡಿದ್ದಾರೆ ಎಂಬ ಮಾತನ್ನು ಹೇಳಿ, ಆ ಬಗ್ಗೆ ಅಲ್ಲಿನ ಸರಕಾರದ ಆಜ್ಞೆಯನ್ನು ಕೊಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಆರ್. ದಯಾನಂದರಾವ್ : ಅದು ಕೇವಲ ಆರ್ಡರ್ ಇರಬಹುದು, ಆದರೆ ಅಲ್ಲಿ ಇಂಪ್ಲಿಮೆಂಟ್ ಆಗಿಲ್ಲ.

ಶ್ರೀ ಟಿ.ಎಂ. ಮಂಜುನಾಥ್ : ಈ ರಾಷ್ಟ್ರದಲ್ಲಿ ರೈತರ ಸಾಲ ಮನ್ನಾ ಮಾಡತಕ್ಕಂಥ ಪದ್ಧತಿ ಪ್ರಾರಂಭವಾದುದು ಶ್ರೀ ವಿ.ಪಿ. ಸಿಂಗ್‌ರವರ ನೇತೃತ್ವದ ಸರಕಾರವು ಕೇಂದ್ರದಲ್ಲಿ ಇದ್ದಾಗ. ಆಗ ಕೇಂದ್ರ ಸರ್ಕಾರದವರು ಒಂದು ಆದೇಶವನ್ನು ಮಾಡಿದಾಗ, ರಾಷ್ಟ್ರದಲ್ಲಿನ ಇತರ ರಾಜ್ಯಗಳಾದವರೂ ಕೂಡ ಅದರ ಪ್ರಕಾರ 10 ಸಾವಿರ ರೂಪಾಯಿಗಳೊಳಗೆ ಯಾರ್‍ಯಾರು ಸಾಲ ಮಾಡಿಕೊಂಡಿದ್ದಾರೆ, ಅಂಥವರ ಸಾಲವನ್ನು ಮನ್ನಾ ಮಾಡತಕ್ಕಂಥ ಒಂದು ವಿಚಾರವನ್ನು ಮಾಡಿದ್ದಾರೆ. ನಮ್ಮ ಸರಕಾರವೂ ಕೂಡ ಆ ದಿಶೆಯಲ್ಲಿ ಕ್ರಮ ತೆಗೆದುಕೊಂಡಿರುವುದು ಮಾನ್ಯ ನಾಯಕರಿಗೆ ಗೊತ್ತಿದೆ. ಆದರೆ ಅವರು ಏನು ಹೇಳುತ್ತಾ ಇದ್ದಾರೆ ಅಂದರೆ, ಮಧ್ಯಪ್ರದೇಶದಲ್ಲಿ ಯಾವುದೇ ನಾರ್ಮ್ಸ್ ಇಲ್ಲದೆ 10 ಸಾವಿರ ರೂಪಾಯಿಗಳವರೆಗೆ ಯಾರು ಕೃಷಿಕರು ಸಾಲ ಮಾಡಿದ್ದಾರೆ ಅವರಿಗೆ ಸಾಲ ಮನ್ನಾ ಮಾಡಿದ್ದಾರೆ. ಅದಕ್ಕಾಗಿ ಸುಮಾರು 350 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ. ಎಂಬ ಒಂದು ಪ್ರಸ್ತಾವನೆಯನ್ನು ಇಲ್ಲಿ ಮಾಡಿದ್ದಾರೆ. ಅದು ಅವರ ಸರಕಾರದ ನಿಲುವು ಇರಬಹುದು. ಹಾಗೆ ಅವರು ತಮ್ಮ ರಾಜ್ಯದಲ್ಲಿ ಮಾಡಿರಬಹುದು. ನಮ್ಮ ಸರಕಾರದ ಅಭಿಪ್ರಾಯವನ್ನು ನಮ್ಮ ಮುಖ್ಯಮಂತ್ರಿಗಳು ಪದೇ ಪದೇ ಸ್ಪಷ್ಟೀಕರಣ ಮಾಡಿ, ನಾವು ಇಂಥ ಆದೇಶದ ಮೇಲೆ ಸಾಲವನ್ನು ಆಗಲೇ ವಜಾ ಮಾಡಿದ್ದೇವೆ, ನಮ್ಮ ಪಾಲಿನ ಹಣವನ್ನು ಈಗಾಗಲೇ ನಾವು ಕಟ್ಟಿದ್ದೇವೆ ಎಂಬ ಮಾತನ್ನು ಹೇಳಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರು ಏನಾದರೂ ಹೊಸ ಸಲಹೆ ಇದ್ದರೆ ಕೊಡಲಿ. ಅದನ್ನು ಬಿಟ್ಟು ಸಾಲ ಮನ್ನಾ ಮಾಡಿ ಮಾಡಿ ಎಂದು ಪುನಃ ಪುನಃ ಹೇಳಿಕೊಳ್ಳುತ್ತಾ ಹೋಗುವುದು ಬೇಡ, ಅದೊಂದು ರೀತಿಯಲ್ಲಿ ಪ್ರಚಾರ ಮಾಡತಕ್ಕಂಥಾದ್ದು ಆಗುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಸಚಿವರಾದ ಮಂಜುನಾಥ್‌ರವರು ಹೇಳುತ್ತಾ ಮಾನ್ಯ ಮುಖ್ಯಮಂತ್ರಿಯವರು ಪದೇ ಪದೇ ಸರಕಾರದ ನೀತಿಯನ್ನು ಸ್ಪಷ್ಟಪಡಿಸಿದ್ದಾರೆ ಎಂದು ಹೇಳಿದರು. ನಾನು ಈ ಬಗ್ಗೆ ಒಂದು ನೆನಪು ಮಾಡಿಕೊಡುತ್ತೇನೆ. ಅದೇನೆಂದರೆ, ಆಗ ಮುಖ್ಯಮಂತ್ರಿಗಳಾಗಿದ್ದ ಶ್ರೀ ವೀರೇಂದ್ರ ಪಾಟೀಲರು ಶ್ರೀ ವಿ.ಪಿ. ಸಿಂಗ್ ಸರಕಾರ ಮಾಡಿದ ಸಾಲಮನ್ನಾ ಯೋಜನೆಯ ಬಗ್ಗೆ ರಿಸರ್ವೇಷನ್ ವ್ಯಕ್ತಮಾಡಿದಾಗ ಈಗಿನ ಮಾನ್ಯ ಮುಖ್ಯಮಂತ್ರಿಯವರು ಕೃಷಿ ಸಚಿವರಾಗಿದ್ದರು. ಆಗ ಅವರು ಶಿವಮೊಗ್ಗದಲ್ಲಿ ಒಂದು ಸ್ಟೇಟ್‌ಮೆಂಟ್ ಇಶ್ಯೂ ಮಾಡಿದರು. ವೀರೇಂದ್ರ ಪಾಟೀಲರು ಹೇಳಿದ್ದು ಸರಿಯಲ್ಲ, ಸಾಲ ಮನ್ನಾ

ಮಾಡಬೇಕು ಎಂದು ಆ ಸಂದರ್ಭದಲ್ಲಿ ಹೇಳಿದ್ದರು. ಇವೊತ್ತು ನಿಮಗೆ ಸಾಲ ಮನ್ನಾ ಮಾಡುವುದಕ್ಕೆ ಸಾಧ್ಯವಿಲ್ಲ. ಕಷ್ಟವಿದೆ ಎಂದು ಹೇಳಿ. ಮಾನ್ಯ ಮುಖ್ಯಮಂತ್ರಿಗಳು 4 ದಿವಸಗಳಿಗೊಮ್ಮೆ ಒಂದು ರೀತಿಯ ಸ್ಟೇಟ್‌ಮೆಂಟ್ ಕೊಡುತ್ತಿದ್ದಾರೆ. ಹಾಗಾಗಿ ನಮಗೆ ಯಾವ ಸ್ಟೇಟ್‌ಮೆಂಟ್ ಎಂದು ತಿಳಿಯುತ್ತಾ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಇಷ್ಟನ್ನು ಹೇಳಲಿಚ್ಛಿಸುತ್ತೇನೆ. ಆವೊತ್ತು ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿರತಕ್ಕಂಥ ಎಲ್ಲಾ ಪಕ್ಷದ ಮುಖಂಡರುಗಳನ್ನು ಕರೆದುಕೊಂಡು ಹೋಗಿದ್ದರು.

4-00 ಪಿ.ಎಂ

(ಗೊಂದಲ)

ಉಪಾಧ್ಯಕ್ಷಿಣಿಯವರು : ಈಗ ಮಾತನಾಡಬೇಕಾದರೆ ನಿಯಮದ ಚೌಕಟ್ಟಿನಲ್ಲಿ ಮಾತನಾಡಬೇಕು. ಅದು ನಿಮಗೂ ಅಪ್ಪೈ ಆಗುತ್ತೆ. ಈಗ ಅವರೆಲ್ಲೇ ಕುಳಿತಿದ್ದಾರೆ. ಯಡಿಯೂರಪ್ಪನವರೇ ಮುಂದುವರಿಸಿ.

ಶ್ರೀ ವಾಟಾಳ್ ನಾಗರಾಜ್ : ಹಿರಿಯ ಮಂತ್ರಿಯವರಾದ ಮಾನ್ಯ ವೀರಪ್ಪಮೊಯ್ಲಿಯವರು ಕುಳಿತಿದ್ದಾರೆ ಅವರು ಕುಳಿತಿದ್ದರೂ ಇವರು ಗೌರವವನ್ನು ಕೊಡ್ತಾ ಇಲ್ಲವಲ್ಲ, ಎಷ್ಟು ಸಲ ಎದ್ದು ನಿಂತು ವರ್ತಿಸುತ್ತಾರೆ, ಸ್ವಲ್ಪ ಸರಿಯಾಗಿ ನಡೆದುಕೊಳ್ಳಿ. ಇದು ಅತಿರೇಕದ ಪರಮಾವಧಿ. ಕೊನೆಗೆ ನಾವು ಇಲ್ಲಿ ಧರಣಿಗೆ ಬರುತ್ತೇವೆ ನೋಡಿ,

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಸಂಸದೀಯ ವ್ಯವಹಾರಗಳ ಮಂತ್ರಿಗಳನ್ನು ವಿನಂತಿಮಾಡಿಕೊಳ್ಳುತ್ತಿದ್ದೇನೆ. ಬೆಳಿಗ್ಗೆಯಿಂದ ನಾವು ನೋಡಿದ್ದೇವೆ. ಮಾನ್ಯ ಯಡಿಯೂರಪ್ಪನವರು ಹೇಳುವ ವಿಚಾರದಲ್ಲಿ ನಮಗೆಲ್ಲ ಪೂರ್ಣ ಸಮ್ಮತಿಯಿದೆ ಎಂಧೇನೂ ಅಲ್ಲ. ಅವರು ವಿಚಾರವನ್ನು ಹೇಳುವುದಕ್ಕೆ ಅವಕಾಶ ಇಲ್ಲವೆಂದರೆ ಹೇಗೆ ಮಧ್ಯಪ್ರದೇಶದ ಗವರ್ನಮೆಂಟ್ ಆರ್ಡರನ್ನು ಅವರ ವಾದಕ್ಕೆ ಪೂರಕವಾಗಿ ಈ ಸದನದ ಮುಂದಿಟ್ಟಿದ್ದಾರೆ. ಅದನ್ನು ಕೇಳೋಣ ಅಂದರೂ ಅದಕ್ಕೆ ಬಿಡುವುದಿಲ್ಲ ಎಂದರೆ ಏನು ಮಾಡುವುದು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ತಮ್ಮ ಪಕ್ಷದ ಶಾಸಕರಿಗೆ ವಿನಂತಿ ಮಾಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಧ್ಯಪ್ರದೇಶದಲ್ಲಿ ಮಾಡಿದ್ದನ್ನು ನೀವೂ ಮಾಡಿ ಎಂದು ಒತ್ತಾಯ ಮಾಡುತ್ತಾ ಇಲ್ಲ. ನಾನು ಈ ಸದನದಲ್ಲಿ ಪ್ರಸ್ತಾಪ ಮಾಡಿದಾಗ, ಮಧ್ಯಪ್ರದೇಶದಲ್ಲಿ ಷರತ್ತುಗಳನ್ನು ತೆಗೆದುಹಾಕಿ ಅಲ್ಲಿರುವ ಸರ್ಕಾರವೇ ಜವಾಬ್ದಾರಿ ತೆಗೆದುಕೊಂಡು ಸಾಲ ಮನ್ನಾ ಮಾಡಿಲ್ಲ, ಮಾಡಿದ್ದರೆ ಆ ಸರ್ಕಾರಿ ಆಜ್ಞೆಯನ್ನು ಕೊಡಿ ಯಡಿಯೂರಪ್ಪನವರೇ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ನಾನು ಲಿಖಿತ ಮೂಲಕ ಒಂದು ಸರ್ಕಾರಿ ಆಜ್ಞೆಯನ್ನು ತರಿಸಿ ಅದನ್ನು ಎಲ್ಲರಿಗೂ ಕಳಿಸಿಕೊಟ್ಟಿದ್ದೆ. ಅದರ ಪ್ರತಿಯನ್ನು ಈಗಲೂ ಕೊಟ್ಟಿದ್ದೇವೆ. ನಿಮಗೆ ಶಕ್ತಿಯಿದ್ದರೆ ಅದರಂತೆ ಮಾಡಿ, ಇಲ್ಲವೆಂದರೆ ನಮಗೂ ಅದಕ್ಕೂ ಸಂಬಂಧವಿಲ್ಲವೆಂದು ಹೇಳಿ. ನನ್ನ ಪಾಯಿಂಟೇನೆಂದರೆ ಸ್ವತಃ ಮುಖ್ಯಮಂತ್ರಿಗಳು ರೈತನ ಬಗ್ಗೆ ಕಳಕಳಿ ಇಟ್ಟುಕೊಂಡು ನಮ್ಮೆಲ್ಲರನ್ನೂ ದೆಹಲಿಗೆ

ಕರೆದುಕೊಂಡು ಹೋಗಿ ಪ್ರಧಾನಿಯವರಲ್ಲಿ ಹಣಕಾಸಿನ ಸಚಿವರಲ್ಲಿ ಮನವಿ ಮಾಡಿದರು.

ಆ ಮನವಿಯಲ್ಲಿ ಒಂದು ಅಂಶವನ್ನು ಸ್ಪಷ್ಟಮಾಡಿದ್ದಾರೆ. ಆ ಮನವಿಯಲ್ಲಿ ನಮ್ಮ ಕೈಲಿ ಏನು ಹೇಳಿಸಿದ್ದಾರೆಂದರೆ ಕೇಂದ್ರ ಸರ್ಕಾರದ ಸಾಲ ಮನ್ನಾ ಯೋಜನೆಯಲ್ಲಿರುವ ಈ ಷರತ್ತಿನಿಂದ ಯಾರಿಗೆ ಸಾಲ ಕಟ್ಟುವ ಪ್ರವೃತ್ತಿ ಇಲ್ಲವೋ ಅವರಿಗೆ ಉಪಯೋಗಿವಾಗಿದೆ, ಈ ಇಂಟೆರೆಸ್ಟ್ ಸಬ್ಸಡಿ ಸ್ಕೀಮಿನಿಂದ ಎಲ್ಲ ಸಾಲಬುಕ್ ಅಜೆಸ್ಟಟ್‌ಮೆಂಟಾಗಿದೆ, ಇದರಿಂದ ಉಪಯೋಗವಾಗಿಲ್ಲ, ಆದ್ದರಿಂದ ಈ ಷರತ್ತುಗಳನ್ನು ತೆಗೆದುಹಾಕಿ ಎಂದು ಒಂದು ಮನವಿಯನ್ನು ಮುಖ್ಯಮಂತ್ರಿಗಳೂ, ನಾವೂ ಸೇರಿ ಕೊಟ್ಟಿದ್ದೇವೆ. ನನ್ನ ಪಾಯಿಂಟ್ ಏನೆಂದರೆ, ತಾತ್ವಿಕವಾಗಿ ರೈತರ ಸಾಲಮನ್ನಾ ಯೋಜನೆ ಕೇಂದ್ರದ ಷರತ್ತಿನಿಂದ ಆಗೋದಿಲ್ಲವೆಂದು ನಿಮಗೆ ಮನವರಿಕೆ ಆದ ಮೇಲೆ ಕೇಂದ್ರದಿಂದಲಾದರೂ ಹಣ ತುಂಬಿಸಿಕೊಡಿ, ನಿಮ್ಮ ರಾಜ್ಯದ ಬೊಕ್ಕಸದಿಂದಲಾದರೂ ಹಣತುಂಬಿಸಿ, ನಿಮ್ಮ ಆಶ್ವಾಸನೆಯಂತೆ ಸಾಲ ಮನ್ನಾ ಮಾಡಿ ಇಲ್ಲದಿದ್ದರೆ ಆಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿ. ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಮೊನ್ನೆ ನಡೆದ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಎಲ್ಲ ಕಡೆ ಹೋದಾಗ 10 ಸಾವಿರ ರೂಪಾಯಿಗಳವರೆಗಿನ ಸಾಲ ಮನ್ನಾ ಆದಿದೆ ಎಂದು ಹೇಳಿ ವೋಟ್ ತೆಗೆದುಕೊಂಡು ಚುನಾವಣೆಯಲ್ಲಿ ಗೆದ್ದಿದ್ದು ಸುಳ್ಳೇ? ಹಿಂದಿನ ಸದನದಲ್ಲಿ ತಡೆಯಾಜ್ಞೆ ಇದ್ದರೂ ನಿಮ್ಮ ಅಧಿಕಾರಿಗಳು ನೋಟಿಸ್ ಕೊಡುತ್ತಿದ್ದಾರೆ ಎಂದಾಗ, ಅಧಿಕಾರಿಗಳು ನೋಟಿಸ್ ಕೊಟ್ಟಿದ್ದರೆ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದು ಸುಳ್ಳೇ? ಆ ರೀತಿ ಅಧಿಕಾರಿಗಳು ನೋಟೀಸ್ ಕೊಟ್ಟು ಸಾಲ ವಸೂಲು ಮಾಡಬಾರದು ಎಂದು ಎರಡು ವರ್ಷದಿಂದ ಹೇಳಿ ಕೊಡು ಬಂದು ಇವತ್ತು ಬಲಾತ್ಕಾರದಿಂದ ಸಾಲ ವಸೂಲು ಮಾಡುತ್ತಿರುವುದು ಏನಿದೆ ಇದು ನಿಮ್ಮ ತಪ್ಪು ನೀತಿ. ಎರಡನೆಯದು, 5 ಪರ್ಸೆಂಟ್ ಬಡ್ಡಿ ಕನ್‌ಸೆಷನ್ ಕೊಡುತ್ತೇವೆ ಎಂದು ಹೇಳಿದಿರಿ. ಅಸಲು ಬಡ್ಡಿ ಕಟ್ಟಿದ 10 ದಿವಸದೊಳಗಾಗಿ ನಿಮಗೆ 5 ಪರ್ಸೆಂಟ್ ಕನ್‌ಸಿಷನ್ ಕೊಡುತ್ತೇವೆ ಎಂದು ಹೇಳಿದಿರಿ. ಇಡೀ ರಾಜ್ಯದಲ್ಲಿ ಈ ರಿಬೇಟನ್ನು ಒಂದು ಪೈಸೆ ಕೊಟ್ಟಿದ್ದೀರಾ? ಕೊಟ್ಟಿಲ್ಲ. ಅಂದರೆ ನಿಮ್ಮಕಳಕಳಿ, ನಿಮ್ಮನ್ನು ಅಧಿಕಾರಕ್ಕೆ ತಂದ ರೈತ, ಬಡವ ಕೂಲಿಕಾರ್ಮಿಕನ ಬಗ್ಗೆ ಅಲ್ಲ, ನಿಮ್ಮ ಕಳಕಳಿ ದೊಡ್ಡ ಉದ್ದಿಮೆದಾರರು ಯಾರಿದ್ದಾರೆ ಅವರ ಬಗ್ಗೆ ಇದೆ, ಅವರ ರಕ್ಷಣೆ ಮಾಡಲು ನೀವು ಹೊರಟಿದ್ದೀರಿ.

ನಾನು ನಿಮ್ಮನ್ನು ಕೇಳುತ್ತೇನೆ. ಬಹುಶಃ ಯಾವ ಶಬ್ದವನ್ನು ಉಪಯೋಗಿಸುಬೇಕೋ ನನಗೆ ಗೊತ್ತಿಲ್ಲ. ಈ ಸರ್ಕಾರ ಬೊಕ್ಕಸವನ್ನು ಲೂಟಿ ಮಾಡಿರತಕ್ಕಂಥ ದೊಡ್ಡ ದೊಡ್ಡ ಆರ್‍ಯಾಕ್ ಕಂಟ್ರಾಕ್ಟರ್‌ಗಳು ಅವರು ಯಾರು ನಿಮ್ಮಲ್ಲಿ ವಿನಂತಿಯನ್ನು ಮಾಡಿದರೋ ಗೊತ್ತಿಲ್ಲ. ಎಲ್ಲಿ, ಎಲ್ಲಿ ಇದನ್ನು ಹೇಳಿದರೋ ಗೊತ್ತಿಲ್ಲ. ಅವರಿಗೆ ಯಾವ ರೀತಿ ಅನುಕೂಲವನ್ನು ಮಾಡಿಕೊಡುವುದಕ್ಕೆ ಹೊರಟಿದ್ದೀರಿ. ಸರ್ಕಾರದ ಬೊಕ್ಕಸವನ್ನು ತುಂಬಿಸುವುದಕ್ಕೆ ಈ ಕಾರ್ಯಕ್ರಮಗಳನ್ನು ಮುಖ್ಯಮಂತ್ರಿಗಳು ಹೇಳುವುದಕ್ಕೆ ಹೋದರು. ಇವತ್ತು 17 ಜನ ಎಕ್ಸೈಜ್ ಕಂಟ್ರಾಕ್ಟರರಿಗೆ ಸುಮಾರು 36 ಕೋಟಿ ರೂಪಾಯಿ ಬಡ್ಡಿ ಮನ್ನಾ ಮಾಡುವುದಕ್ಕೆ ಸಿದ್ಧವಿರುವ ಈ ಸರ್ಕಾರ, ಅವರ ಮೇಲೆ ಕಳೆದ 8-10 ವರ್ಷಗಳಿಂದ ಬಾಕಿ ಇದ್ದಂಥ 42 ಕೋಟಿ ರೂಪಾಯಿಗಳನ್ನು

ಕಂತುಗಳಲ್ಲಿ ತೆಗೆದುಕೊಳ್ಳುವುದಕ್ಕೆ ಸಿದ್ಧವಿರುವ ಸರ್ಕಾರ, ನಿಮ್ಮನ್ನು ಅಧಿಕಾರಕ್ಕೆ ಏರಿಸಿದಂಥ ಈ ರಾಜ್ಯದ ರೈತ ಸಮೂಹದ ಬೆಳೆ ನಾಶವಾಗಿದೆ, ಅವರು ಬೆಳೆದಂಥ ಬೆಳೆಗಳಿಗೆ ವೈಜ್ಞಾನಿಕವಾಗಿ ಸರಿಯಾಗಿ ಬೆಲೆ ಸಿಗದೇ ಸಾಲಗಾರರ ಮಗನಾಗಿ ಭಿಕ್ಷುಕನಂತೆ ಅಲೆಯುತ್ತಿರುವ ರೈತನ ನೆರವಿಗೆ ಬರುತ್ತೇವೆಂದು ಆಶ್ವಾಸನೆಯನ್ನು ಕೊಟ್ಟು, ಸಾಲವನ್ನು ಮನ್ನಾ ಮಾಡುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಕೊಟ್ಟು ಇವತ್ತುಅದನ್ನು ಮಾಡದೆ ಹಿಂದೆ ಸರಿದು ಇವತ್ತು ಅವರ ಪರವಾಗಿ ನಿಂತಿರತಕ್ಕ ಈ ಸರ್ಕಾರಿ ಅರ್ರ್ಯಾಕ್ ಕಂಟ್ರಾಕ್ಟರರಿಗೆ ಬಡ್ಡಿ ಮನ್ನಾ ಮಾಡುವುದಕ್ಕೆ ಬಂದಂಥದ್ದಕ್ಕೆ ಕೈಕಟ್ಟಿಕೊಂಡು ಕುಳಿತಿರತಕ್ಕಂಥ ಬಂಗಾರಪ್ಪನವರ ಸರ್ಕಾರದಲ್ಲಿ ಇರತಕ್ಕಂಥ ಎಲ್ಲಾ ಶಾಸಕ ಸ್ನೇಹಿತರು ಏನಿದ್ದೀರಿ. ನೀವೆಲ್ಲರೂ ಕೂಡ ಇದಕ್ಕೆ ಜವಾಬ್ದಾರಿ ಇದ್ದೀರಿ. ನಾನು ಮಾನ್ಯ ಬಂಗಾರಪ್ಪನವರ ಮೇಲೆ ಛಾರ್ಜ್ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇದು ಒಂದು ಮಂತ್ರಿಮಂಡಲದ ತೀರ್ಮಾನ. ಇದನ್ನು ಯಾರು ಯಾರನ್ನು ಕೇಳಿ ನೀವು ಮಾಡಿದಿರಿ? ಈ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಬಹುಮತ ಇದೆ ಎಂದು ಹೇಳಿ ಮನಬಂದಂತೆ ತೊಘಲಕ್ ದರ್ಬಾರನ್ನು ನಡೆಸುತ್ತೀರಾ? 17 ಜನರಿಗೆ 38 ಕೋಟಿ ರೂಪಾಯಿ ಬಡ್ಡಿಯನ್ನು ಮನ್ನಾ ಮಾಡುವುದಕ್ಕೆ ಸಿದ್ಧರಿದ್ದೀರಿ. 15-20 ಲಕ್ಷ ಕುಟುಂಬಗಳಿಗೆ ಸಂಬಂಧಪಟ್ಟ ಸುಮಾರು 300 ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದರೆ ಆ ಜನರು ಗೌರವದಿಂದ ತಮ್ಮ ಭೂಮಿಯಲ್ಲಿ ಒಳ್ಳೆಯ ಬೆಳೆಯನ್ನು ಬೆಳೆಯುವುದಕ್ಕೆ ಅವಕಾಶವನ್ನು ಮಾಡಿಕೊಡಲಿಕ್ಕೆ ನಿಮಗೆ ಶಕ್ತಿ ಇಲ್ಲ.

ಒಂದೇ ಒಂದು ಕಮರ್ಷಿಯಲ್ ಟ್ಯಾಕ್ಸ್‌ನಿಂದ 600 ಕೋಟಿ ರೂಪಾಯಿ ಹೆಚ್ಚು ಆದಾಯ ಬಂದಿದೆ. ಅದರಲ್ಲಿ ಸುಮಾರು 300 ಕೋಟಿ ರೂಪಾಯಿಗಳನ್ನು ಕೊಟ್ಟರೆ ರೈತರು ಗೌರವದಿಂದ ಜೀವನ ಮಾಡುವುದಿಲ್ಲವೇ? ಈ ಕೆಲಸವನ್ನು ಮಾಡುವಂಥ ಒಂದು ದಿಟ್ಟ ಹೆಜ್ಜೆಯನ್ನು ಇಡಿ. ಇಲ್ಲದಿದ್ದರೆ ಈ ರೀತಿ ಇಡುವುದಕ್ಕಾಗುವುದಿಲ್ಲ, ಯಡಿಯೂರಪ್ಪನವರೇ, ನೀವು ಎಷ್ಟು ಬೇಕಾದರೂ ಕೂಗಿಕೊಳ್ಳಿ, ನಾವು ಇದಕ್ಕೆ ಬದ್ಧವಾಗಿಲ್ಲ ಎಂದು ಹೇಳಿ. ನಾವು ಚುನಾವಣೆ ಸಮಯದಲ್ಲಿ ಮಾತ್ರ ಜನತೆಗೆ ಆಶ್ವಾಸನೆಯನ್ನುಕೊಡುತ್ತೇವೆ. ಆದರೆ ಅದನ್ನುಕೃತಿಯಲ್ಲಿ ತರುವುದಿಲ್ಲ, ರೈತ ವಿರೋಧಿ ನೀತಿಯನ್ನು ಅನುಸರಿಸುತ್ತೇವೆ ಎಂದು ಹೇಳಿ. ಅದಕ್ಕೆ ನನ್ನದೇನೂ ವಿರೋಧ ಇಲ್ಲ. ನನ್ನ ಬೇಡಿಕೆ ಏನು ಇದೆ. ನನ್ನ ಒತ್ತಾಯ ಏನು ಇದೆ ಅದು ರೈತರ ಪರವಾಗಿ ನಾನುಒತ್ತಾಯವನ್ನು ಮಾಡುತ್ತಿದ್ದೇನೆ. ಅದಕ್ಕೆ ನಾನು ಈ ಸರ್ಕಾರಕ್ಕೆ ಕಿವಿ ಇಲ್ಲ, ಈ ಸರ್ಕಾರಕ್ಕೆ ರೈತರಬಗ್ಗೆ ಕಳಕಳಿ ಇಲ್ಲ ಎಂದು ಹೇಳುವುದು. ರೈತರು ಮನೆಯಲ್ಲಿ ಮಲಗಿದ್ದಾರೆ. ಅವರನ್ನು ಬಡಿದೆಬ್ಬಿಸಬೇಕು. ಶಾಸನ ಸಭೆಯಲ್ಲಿ ಚರ್ಚೆ ಮಾಡಿದರೆ, ಮಾತನಾಡಿದರೆ ಏನೂ ಉಪಯೋಗ ಇಲ್ಲ ಎಂದು ಗೊತ್ತಾದಮೇಲೆ ಶಾಸನಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸದೆ ಹೆಂಡದ ದೊರೆಗಳ ಕೈಗೊಂಬೆಯಾಗಿ ವರ್ತನೆ ಮಾಡುತ್ತಿರುವ ಈ ಸರ್ಕಾರದ ನೀತಿ, ಈ ರೈತ ವಿರೋಧಿ ನೀತಿಯನ್ನು ನಾಡಿನ ನಾಲ್ಕುವರೆ ಕೋಟಿ ಜನರನ್ನು ಜಾಗೃತಿ ಮಾಡುವುದಕ್ಕೆ ಹಳ್ಳಿಹಳ್ಳಿಯಲ್ಲೂ ನಾನು ಹುಚ್ಚನಂತೆ ಅಲೆಯುವುದಕ್ಕೆ ಸಿದ್ಧನಿದ್ದೇನೆ. ಇವತ್ತು ನಾನು ಹೊರಗಡೆ ಹೋಗುತ್ತೇನೆ. ಪ್ರಜಾತಂತ್ರದ ಈ ವ್ಯವಸ್ಥೆಯಲ್ಲಿ ನಾಲ್ಕುವರೆ ಕೋಟಿ ಜನರ ಅಭಿಪ್ರಾಯಕ್ಕೆ ಮನ್ನಣೆ ಇದೆಯೋ ಅಥವಾ ನಿಮ್ಮ ಬಹುಮತಕ್ಕೆ ಮನ್ನಣೆ ಇದೆಯೋ ನೋಡೋಣ. ತೊಘಲಕ್ ದರ್ಬಾರನ್ನು ನಡೆಸುವುದಕ್ಕೆ ಹೋಗುತ್ತಿರುವ ಈ

ಸರ್ಕಾರ ಎಷ್ಟು ವರ್ಷ ಅಧಿಕಾರದಲ್ಲಿ ಮುಂದುವರಿಯುತ್ತದೆ ಎನ್ನುವುದನ್ನು ನೋಡೋಣ. ಇದನ್ನು ನೋಡುವುದಕ್ಕೋಸ್ಕರ ನಾನು ಬೀದಿಗೆ ಇಳಿಯುವುದಕ್ಕೆ ಸಿದ್ಧನಿದ್ದೇನೆ. ನೋಡಿ, ಇಲ್ಲೇ ನಿಮ್ಮ ಗಂಟಲು ಹಿಡಿಯುವುದು. ನಾನು ಇನ್ನು ಮುಂದಿನ ವಿಷಯಕ್ಕೆ ಹೋಗುತ್ತೇನೆ.

ಶ್ರೀ ಆರ್.ಎನ್. ನಾಯಕ್ ; ನೀವು ಪಂಜಾಬ್‌ನಿಂದ ಯಾವಾಗ ಬಂದ್ರಿ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : 5 ಪರ್ಸೆಂಟ್ ರಿಬೇಟನ್ನು ಕೊಡುತ್ತೇವೆ ಎಂದು ಸರ್ಕಾರಿ ಆಜ್ಞೆಯನ್ನು ಕೂಡ ಹೊರಡಿಸಿದಿರಿ.

ಶ್ರೀ ಆರ್. ದಯಾನಂದರಾವ್ : ರಾಮಯಾತ್ರೆ ಆಯಿತು.

(ಗೊಂದಲ)

ಶ್ರೀ ಎ.ಬಿ. ಜಕನೂರು : ಮಾನ್ಯ ಯಡಿಯೂರಪ್ಪನವರು, ನಾವು ಮೋಸ ಮಾಡಿ ಆಶ್ವಾಸನೆಯನ್ನು ಕೊಟ್ಟು, ಹತ್ತು ಸಾವಿರ ರೂಪಾಯಿಗಳ ಸಾಲವನ್ನು ಬಿಡುತ್ತೇವೆ ಎಂದು ಹೇಳಿ ಅಧಿಕಾರಕ್ಕೆ ಬಂದಿದ್ದೇವೆ ಎಂದು ಹೇಳುತ್ತಿದ್ದಾರೆ. ಸ್ವಾಮಿ, ಇದನ್ನು ನಾವು ಅಂದಿದ್ದಲ್ಲ. ನ್ಯಾಷನಲ್ ಫ್ರಂಟ್ ಗೌರ್ನಮೆಂಟ್‌ನವರು ಅನೌನ್ಸ್ ಮಾಡಿದರು. ಇದನ್ನು ಕಾಂಗ್ರೆಸ್‌ನವರು ಅನೌನ್ಸ್ ಮಾಡಲಿಲ್ಲ. ಇದನ್ನು ತಾವು ಸ್ವಲ್ಪ ಲಕ್ಷ್ಯದಲ್ಲಿ ಇಡಿ.

ಶ್ರೀ ಆರ್.ವಿ. ದೇಶಪಾಂಡೆ : ನ್ಯಾಷನಲ್ ಫ್ರಂಟ್ ಗೌರ್ನಮೆಂಟ್‌ನವರು ಮಾಡಲಿಲ್ಲ. ನ್ಯಾಷನಲ್ ಫ್ರಂಟ್ ಗೌರ್ನಮೆಂಟ್‌ನವರು ಒಂದು ಪ್ರಪೋಸಲ್‌ನ್ನು ಇಟ್ಟರು. ಈ ಪ್ರಪೋಸಲ್‌ನ್ನು ನೀವು ಇಂಪ್ಲಿಮೆಂಟ್ ಮಾಡಬೇಕಾಗಿತ್ತು. ರಾಜ್ಯಸರ್ಕಾರ ಆದಕ್ಕೆ ಕೋ-ಅಪರೇಟ್ ಮಾಡಲಿಲ್ಲ. ನಿಮ್ಮ ಸರ್ಕಾರ ಆದಕ್ಕೆ ಕೋ-ಅಪರೇಟ್ ಮಾಡಬೇಕಾಗಿತ್ತು.

(ಗೊಂದಲ)

ಶ್ರೀ ಸಿ. ಬೈರೇಗೌಡ : ಅವರ ಪ್ರಣಾಳಿಕೆಯಲ್ಲಿ ಇರತಕ್ಕಂಥದ್ದು ಏನೆಂದರೆ, ಈ ಸಾಲವನ್ನು ವಜಾ ಮಾಡುವುದಕ್ಕೆ ಕೇಂದ್ರಸರ್ಕಾರಕ್ಕೆ ಮನವಿಯನ್ನು ಮಾಡಿ ಕೊಳ್ಳುತ್ತೇವೆ ಎನ್ನತಕ್ಕಂಥದ್ದು. ಹಾಗಾದರೆ ಇವತ್ತಿನ ದಿವಸ ನಿಮ್ಮ ಸರ್ಕಾರ ಇದೆ. ನ್ಯಾಷನಲ್ ಫ್ರಂಟ್ ಗೌರ್ನಮೆಂಟ್ ಬಂದು ಹೋಗಿದ್ದು ಆಯಿತು. ಇವತ್ತು ನಿಮ್ಮ ಸರ್ಕಾರ ಕೇಂದ್ರದಲ್ಲಿ ಬಂದಿದೆ. ಆ ನಿಮ್ಮ ಕೇಂದ್ರ ಸರ್ಕಾರದ ಮುಂದೆ ನಮ್ಮನ್ನು ಕರೆದುಕೊಂಡು ಹೋದಿರಿ, ಡೆಲಿಗೇಷನನ್ನು ತೆಗೆದುಕೊಂಡು ಹೋದಿರಿ. ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿಸಿದಿರಿ. ಅರ್ಥಮಂತ್ರಿಗಳನ್ನು ಕೂಡ ಭೇಟಿ ಮಾಡಿಸಿದಿರಿ. ಅವರಿಂದ ಒಪ್ಪಿಸಿಕೊಳ್ಳಿ. ದಯವಿಟ್ಟು ಇದಕ್ಕೆ ತಾವು ಒಪ್ಪಿಸಿ.

ಉಪಾಧ್ಯಕ್ಷರು : ಯಡಿಯೂರಪ್ಪನವರೇ, ತಾವು ಮಾತನಾಡಿ.

ಶ್ರೀ ಆರ್. ದಯಾನಂದರಾವ್ : ಹಿಂದೆ ಇದ್ದ ಕೇಂದ್ರಸರ್ಕಾರದವರು ಖಜಾನೆಯನ್ನು ಖಾಲಿ ಮಾಡಿಬಿಟ್ಟಿದ್ದರು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ನಿಮ್ಮ ನಿಲುವನ್ನು ಸ್ಪಷ್ಟಮಾಡಿ. ಒಂದು ಸರ್ಕಾರಕ್ಕೆ ಮನ್ನಣೆಯನ್ನು ಕೊಟ್ಟು ಅದಕ್ಕೆ ಕಿವಿ ಹಿಡಿದು ಕೆಲಸವನ್ನು ಮಾಡಿಸಬಹುದು. ನನ್ನ ಪರಿಮಿತಿ ಏನು ಎಂದು ನನಗೆ ಗೊತ್ತಿದೆ. ನೀವು

ಕೊಟ್ಟಂಥ ಆಶ್ವಾಸನೆಗಳನ್ನು ಈಡೇರಿಸುತ್ತೀರೋ ಇಲ್ಲವೋ ಎನ್ನತಕ್ಕಂಥ ಮಾತನ್ನು ನಾನು ಕೇಳುತ್ತಿದ್ದೇನೆ.

ಇವತ್ತು ಈ ರಾಜ್ಯದ ರೈತ ಸಮೂಹಕ್ಕೆ ಈ ಸದನದ ಮೂಲಕ ನಾನು ಕರೆಯನ್ನು ಕೊಡುತ್ತೇನೆ. ಇವತ್ತು ಇವರು ಆಶ್ವಾಸನೆಯನ್ನು ಕೊಟ್ಟಂತೆ ಷರತ್ತುಗಳನ್ನು ತೆಗೆದುಹಾಕಿ ರೈತರ ನೇಕಾರರ ಕೃಷಿ ಕಾರ್ಮಿಕರ ಹತ್ತು ಸಾವಿರ ರೂಪಾಯಿಗಳವರೆಗಿನ ಸಾಲವನ್ನು ಮನ್ನಾ ಮಾಡದೇ ಇದ್ದರೆ ದಿನಾಂಕ 2-10-89ಕ್ಕೆ ಯಾರ್ಯಾರು ಸಾಲವನ್ನು ಪಡೆದಿದ್ದರು ಆ ರೈತ ಸಮೂಹ 10 ಸಾವಿರ ರೂಪಾಯಿಯಲ್ಲಿ ಒಂದು ಪೈಸೆ ಸಾಲವನ್ನು ಕಟ್ಟಬೇಡಿ ಯಾವ ಸಹಕಾರಿ ಅಧಿಕಾರಿಗಳು ಹಳ್ಳಿಗೆ ಹೋಗಿ ಮನೆಗಳನ್ನು ಜಪ್ತಿ ಮಾಡಿ, ರೈತನ ಮನೆಯೊಳಗೆ ಹೋಗಿ ವಾಪಸ್ಸು ಬರುತ್ತಾರೆ ಅವರಿಗೆ ಸರಿಯಾದಂತಹ ಪಾಠ ಕಲಿಸುವುದಕ್ಕೆ ಇವತ್ತು ರೈತ ಸಮೂಹ ಸಿದ್ಧರಿದ್ದಾರೆ. ಆ ಬಲತ್ಕಾರದ ಸಾಲ ವಸೂಲಿಗೆ ಬಹಿಷ್ಕಾರಮಾಡಿ, ಹೋರಾಟ ಮಾಡಿ ಯಾವ ಕಾರಣಕ್ಕೂ ಸಹ ವಸೂಲಾತಿಯಾಗದಂತೆ ನೋಡಿ ಕೊಳ್ಳುವ ಶಕ್ತಿ ಇವತ್ತು ರೈತ ಸಮೂಹಕ್ಕೆ ಇದೆ. ಈ ಕರೆಯನ್ನು ನಾನು ಕೊಡುತ್ತೇನೆ. ಯಾವ ಕಾರಣಕ್ಕೂ ಸಹ ನಮ್ಮ ರೈತ, ನೇಕಾರ, ಕೃಷಿ ಕಾರ್ಮಿಕ 10ಸಾವಿರದವರೆಗಿನ ಸಾಲಕಟ್ಟಬೇಡಿ, ಹೋರಾಟ ಮಾಡೋಣ, ಇವತ್ತು ರೈತ ಸಮೂಹಕ್ಕೆ ಜಯಸಿಗುತ್ತದೋ ಅಥವಾ ಇವತ್ತು ಅಧಿಕಾರ ಮದದಲ್ಲಿ ಜನಹಿತವನ್ನು ಮರೆತಿರುವಂತಹ ಸರ್ಕಾರ ಎಷ್ಟರಮಟ್ಟಿಗೆ ಹಠವನ್ನು ಸಾಧಿಸುತ್ತದೆಂದು ನೋಡೋಣ ಎನ್ನುವಂತಹ ಕರೆಯನ್ನು ಸಹ ಕೊಡುತ್ತೇನೆ. ಕಳೆದ ಅನೇಕ ತಿಂಗಳುಗಳಿಂದ ಜನಹಿತಕಾರಕವಾದಂತಹ ಹೋರಾಟ ನಡೆಯುತ್ತಿದೆ.

(ಗೊಂದಲ)

ಶ್ರೀ ಆರ್.ಎನ್. ನಾಯಕ್ : ಪಂಜಾಬ್‌ನಲ್ಲಿ ನಿಮ್ಮ ಗತಿ ಏನಾಯಿತು?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ನೀವು ಯಾರಿಗೆ ನೀತಿ ಸಂಹಿತೆ ಹೇಳುತ್ತಿದ್ದೀರಿ? ಅಧ್ಯಕ್ಷರು ಮಾತನಾಡುವ ಸಂದರ್ಭದಲ್ಲಿ ಕೆಲವು ಚೌಕಟ್ಟಿನಲ್ಲಿ ನಡೆದುಕೊಳ್ಳಬೇಕೆಂದು ಹೇಳಿದರು. ಅದು ಈ ಕಡೆಯವರಿಗೆ ಮಾತ್ರ ಎನ್ನುವುದಾದರೆ ನಾನು ಮಾತನಾಡುವುದನ್ನು ನಿಲ್ಲಿಸುತ್ತೇನೆ. ಅಥವಾ ಈ ರೀತಿ ನಡೆಯಬೇಕೆಂದರೆ ನಾವು ಹಾಗೆ ನಡೆದುಕೊಳ್ಳಲು ಸಿದ್ಧರಿದ್ದೇವೆ.

ಶ್ರೀ ಆರ್.ಎನ್. ನಾಯಕ್ : ಪಂಜಾಬ್‌ನಲ್ಲಿ ನಿಮ್ಮ ಗತಿ ಏನಾಯಿತು?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಇವತ್ತು ನಿಶ್ಚಯಮಾಡಿದ್ದೇವೆ. ಈ ಸರ್ಕಾರಕ್ಕೆ ಕಿವಿ ಕೇಳುವುದಿಲ್ಲ, ಯಾವುದೇ ಸಲಹೆಯನ್ನು ನೀವು ತೆಗೆದುಕೊಳ್ಳುವುದಕ್ಕೂ ಸಿದ್ಧರಿಲ್ಲ, ಅಧಿಕಾರದ ಮದದಲ್ಲಿದ್ದೀರಿ, ಬಹಳ ಕಾಲ ಅಧಿಕಾರದಲ್ಲಿ ಮುಂದುವರಿಯಬಹುದೆಂಬ ಭ್ರಮೆಯಲ್ಲಿದ್ದೀರಿ. ಜನ ನಿಮ್ಮನ್ನು ಆಚೆಗೆ ಕಳುಹಿಸುತ್ತಾರೆಂಬ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ನಾವು ವಿರೋಧ ಪಕ್ಷದ ಸದಸ್ಯರು ಕಡಿಮೆ ಇದ್ದೇವೆಂದು ನೀವು ಏನು ಬೇಕಾದರೂ ಮಾಡಬಹುದೆಂದು ತಿಳಿದುಕೊಂಡಿದ್ದೀರಿ. ಪಂಜಾಬ್‌ನಲ್ಲಿ ಏನಾಯಿತೆಂಬುದು ನಮಗೆ ಗೊತ್ತಿದೆ. ಚುನಾವಣೆಯ ಸಂದರ್ಭದಲ್ಲಿ ಮೋಸ ನಡೆದಿದೆ.

(ಗೊಂದಲ)

ಶ್ರೀ ಆರ್.ಎನ್. ನಾಯಕ್ : ಪಂಜಾಬ್‌ನಲ್ಲಿ ನಿಮ್ಮ ಕತೆ ಏನಾಯಿತು?

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ವಿಚಾರ ತಿಳಿದುಕೊಳ್ಳಿ. ನೀವು ಬಂಗಾರಪ್ಪನವರ ಪರ ವಕಾಲತ್ತು ಮಾಡಿದರೂ ಕೂಡ, ಬಂಗಾರಪ್ಪನವರು ನಿಮ್ಮನ್ನು ಮಂತ್ರಿಯಾಗಿ ಮಾಡುವುದಿಲ್ಲ.

(ಗೊಂದಲ)

ಶ್ರೀ ಆರ್.ಎನ್. ನಾಯಕ್ : ಪಂಜಾಬಿನಲ್ಲಿ ನಿಮ್ಮ ಹಣೆ ಬರಹ ಗೊತ್ತಾಗಲಿಲ್ಲವೇ?

(ಗೊಂದಲ)

ಶ್ರೀ ಎ. ರುಕ್ಮಯ್ಯಪೂಜಾರಿ : ಪಂಜಾಬ್ ಚುನಾವಣೆಯ ಸಂದರ್ಭದಲ್ಲಿ ಮೋಸ ನಡೆದಿರುವುದು ಎಲ್ಲರಿಗೂ ಗೊತ್ತಿದೆ.

ಶ್ರೀ ಆರ್.ಎನ್. ನಾಯಕ್ : ರಾಮರಥ ಹೋದಾಗಲೇ ನಿಮ್ಮ ತಲೆಯ ಮೇಲೆ ಚಪ್ಪಡಿ ಹಾಕಿಕೊಂಡು ಹೋಗಿದ್ದೀರಿ..

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಮಾತನಾಡುವಾಗ ಅವರಿಗೆ ಅಡ್ಡಿ ಮಾಡಬೇಕೆನ್ನುವ ಅಭಿಪ್ರಾಯ ನಮ್ಮ ಸದಸ್ಯರಿಗೆ ಯಾರಿಗೂ ಇಲ್ಲ, ನಾನು ಅವರಲ್ಲಿ ಕಳಕಳಿಯಿಂದ ವಿನಂತಿಮಾಡುವುದು ಇಷ್ಟೆ. ಅವರು ಸಾಲ ಮನ್ನಾ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಅವರು ಅದನ್ನು ವಿಶ್ಲೇಷಣೆ ಮಾಡಿ ಹೇಳಿದರೂ ಸಹಿತ ಪದೇಪದೇ ಅದನ್ನೇ ಹೇಳಿ ನಿಮ್ಮ ಸರ್ಕಾರ ಕಿವುಡಾಗಿದೆ, ಕುರುಡಾಗಿದೆ, ಎಂದೆಲ್ಲಾ ಹೇಳಿದರು. ಅವರು ಟೀಕೆ ಮಾಡಲಿ, ನಾವು ಒಪ್ಪಬೇಕಾದ್ದು. ಆದರೆ ಅವರು ಹೇಳಿರುವುದಕ್ಕೆ ಈಗಾಗಲೇ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ಕೊಟ್ಟಿದ್ದಾರೆ. ಯಾವರೀತಿ ಹೇಳಿದ್ದೀರಿ, ಏನು ಹೇಳಿದ್ದೀರಿ ಎನ್ನುವುದು ಎಲ್ಲರಿಗೂ ಗೊತ್ತಿದೆ. ಇದರ ಬಗ್ಗೆ ತಾವು ಸಾಕಷ್ಟು ಮಾತನಾಡಿದ್ದೀರಿ. ಅವರು ಬಂದಾಗ ವಿವರಣೆಯನ್ನು ಕೇಳೋಣ. ಈಗ ತಾವು ಮುಂದಿನ ವಿಚಾರಕ್ಕೆ ಹೋಗಿ. ನಮ್ಮ ಪಕ್ಷಕ್ಕೆ ತಾವು ಸವಾಲು ಹಾಕುತ್ತಿದ್ದೀರಿ. ಈ ರೀತಿ ಸವಾಲು ಹಾಕತಕ್ಕಂತಹ ಸಂದರ್ಭದಲ್ಲಿ..

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ತಾವು ಯಾವ್ಯಾವ ವಿಚಾರಗಳನ್ನು ಮಾತನಾಡಬೇಕೆಂದು ಬರೆದುಕೊಟ್ಟರೆ ನಾವು ಅದೇ ಪ್ರಕಾರ ಮಾತನಾಡುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ನಾಯಕ್‌ರವರು ಹೇಳಲಿ ಸೊರಕೆಯವರು ಹೇಳಲಿ, ನಾನು ಅವರು ಹೇಳಿದ ಪ್ರಕಾರ ಮಾತನಾಡುತ್ತೇನೆ.

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್ : ಅವರು ನಿಮ್ಮ ಸರ್ಕಾರಕ್ಕೆ ಯೋಗ್ಯತೆ ಇದೆಯೇ ಎಂದು ಹೇಳಿದರು. ಇದರ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಿಲ್ಲ, ಮಾನ್ಯ ವಾಟಾಳ್ ನಾಗರಾಜ್‌ರವರೇ, ತಮಗೂ ಹೇಳತಕ್ಕ ಶಕ್ತಿ ನನಗೆ ಇಲ್ಲ. ತಾವು ಯಾವರೀತಿ ಬೇಕಾದರೂ ಮಾತನಾಡಬಹುದು. ಅವರು ಯಾವ ರೀತಿ

ಬೇಕಾದರೂ ಮಾತನಾಡಲಿ ನಾನು ಅದರ ಬಗ್ಗೆ ಮಾತನಾಡುವುದಿಲ್ಲ, ನಾನು ಕಳಕಳಿಯಿಂದ ವಿನಂತಿಮಾಡಿಕೊಳ್ಳುವುದು ಇಷ್ಟೆ. ಒಂದೇ ವಿಚಾರವನ್ನು ಸುಮಾರು ಅರ್ಧ ಗಂಟೆಯಿಂದ ವಿಶ್ಲೇಷಣೆ ಮಾಡುತ್ತಿದ್ದೀರಿ. ತಾವು ಇನ್ನೂ ಅನೇಕ ವಿಚಾರಗಳ ಬಗ್ಗೆ ಮಾತನಾಡುವುದು ಇದೆ. ಅವುಗಳ ಬಗ್ಗೆ ಮಾತನಾಡಿ. ತಾವು ಇನ್ನು ಮುಂದಕ್ಕೆ ಬನ್ನಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ..

ಉಪಾಧ್ಯಕ್ಷಿಣಿಯವರು : ಮಾನ್ಯ ಯಡಿಯೂರಪ್ಪನವರೇ, ನೀವು 3.15 ಗಂಟೆಗೆ ಮಾತನಾಡುವುದಕ್ಕೆ ಪ್ರಾರಂಭ ಮಾಡಿದಿರಿ. ನೀವು ಮಾತನಾಡುವಾಗ ಗದ್ದಲಕ್ಕೆ ಅವಕಾಶ ಮಾಡಿಕೊಡಬೇಡಿ. ಇತರ ಸದಸ್ಯರೂ ಸಹಾ ಸದನದಲ್ಲಿ ಗದ್ದಲ ಮಾಡಬೇಡಿ. ಬೇರೆ ಸದಸ್ಯರುಗಳು ಮಾತನಾಡುವವರಿದ್ದಾರೆ. ಆದ್ದರಿಂದ ದಯವಿಟ್ಟು ಬೇಗ ಮುಗಿಸಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಸಣ್ಣ ಉಳಿತಾಯ ಮಂತ್ರಿಗಳು ನಮಗೆ ಸಲಹೆ ಕೊಟ್ಟಿದ್ದಾರೆ. ಸಮಯವನ್ನು ಎಷ್ಟೆಷ್ಟು, ಎಲ್ಲೆಲ್ಲಿ ಹೇಗೆ ಉಳಿತಾಯ ಮಾಡಬೇಕೆಂದು ನಮಗೆ ಹೇಳಿದರೆ ಅಷ್ಟು ಉಳಿತಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಒಬ್ಬ ಮಾನ್ಯ ಸದಸ್ಯರು : ಸಣ್ಣ ಉಳಿತಾಯ ಮಂತ್ರಿಗಳಿಂದ ಸಮಯದ ಹರಣವಾಗುತ್ತಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಹೇಳುವ ಹಾಗೂ ಕೇಳುವ ಸ್ವಾತಂತ್ರ್ಯ ಇಲ್ಲದಿದ್ದರೆ ಸದನವನ್ನು ಏತಕ್ಕೆ ನಡೆಸಬೇಕು ?

ಡಾ. ವೈ. ನಾಗಪ್ಪ ....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ಕಾವೇರಿ ಜಲ ವಿವಾದವನ್ನು...

(ಗೊಂದಲ)

ಮನಸ್ಸಿಗೆ ಬಂದಂತೆ ಹುಚ್ಚಾಪಟ್ಟೆ ಮಾತನಾಡುವ ಪ್ರವೃತ್ತಿಯನ್ನು ನಿಲ್ಲಿಸಿ.

ಡಾ. ವೈ. ನಾಗಪ್ಪ : ಬುದ್ಧಿವಂತರೆನಿಸಿಕೊಂಡ ಜನರು ಮಾತನಾಡುವ ರೀತಿಯೇ ಇದು? 'ನೀನ್ಯಾರೋ ಕೇಳುವುದಕ್ಕೆ' ಎಂದರೆ ಏನರ್ಥ? ಮನ ಬಂದಂತೆ ಮಾತನಾಡುವುದಕ್ಕೋಸ್ಕರವೇ ಶಾಸನಸಭೆ ಕರೆಯುತ್ತಾರೆಯೇ?

ಒಬ್ಬ ಮಾನ್ಯ ಸದಸ್ಯರು : ಇದು ಸಂಸತ್ತಿನಲ್ಲಿರುವ ಜನರು ಮಾತನಾಡುವ ಭಾಷೆಯೇ?

(ಗೊಂದಲ)

(ಈ ಸಂದರ್ಭದಲ್ಲಿ ಸದಸ್ಯರುಗಳಾದ ಶ್ರೀ ವಾಟಾಳ್ ನಾಗರಾಜ್, ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ಎ. ರುಕ್ಮಯ್ಯಪೂಜಾರಿ, ಶ್ರೀ ಆರ್.ವಿ. ದೇಶಪಾಂಡೆ, ಮತ್ತು ಶ್ರೀ ಜೆ.ಸಿ. ಮಾಧುಸ್ವಾಮಿ ಅವರು ಸಭಾತ್ಯಾಗ ಮಾಡಿದರು)

ಶ್ರೀ ಡಿ.ಬಿ. ಚಂದ್ರೇಗೌಡ : ತಾವು ಸದಸ್ಯರ ಹಕ್ಕನ್ನು ಮತ್ತು ಬಾಧ್ಯತೆಗಳನ್ನು ರಕ್ಷಣೆ ಮಾಡಬೇಕು. ತಮಗೂ ರಕ್ಷಣೆ ಮಾಡುವುದಕ್ಕೆ ಅವರು ಅವಕಾಶ

ಕೊಡುತ್ತಿಲ್ಲ, ಶಾಸನಸಭೆಯಲ್ಲಿ ನಿಯಮಗಳು ಇಲ್ಲವೇ? ರೀತಿ-ನೀತಿಗಳು ಇಲ್ಲವೇ? ಇಂತಹ ಪ್ರವೃತ್ತಿಯಲ್ಲಿ ಶಾಸನಸಭೆಯಲ್ಲಿ ನಾವು ಹೇಗೆ ಕೆಲಸ ಮಾಡುವುದಕ್ಕಾಗುತ್ತದೆ? ಒಂದು ಸಾರಿ ನಿಯಮ ಹಾಕುವವರೆಗೆ ನಾವು ಈ ಸದನಕ್ಕೆ ಬರಬೇಕೋ, ಬೇಡವೋ ಎನ್ನತಕ್ಕಂಥ ನಿರ್ಣಯ ಮಾಡುತ್ತೇವೆ. ಇವರು ಮಾತನಾಡುವುದಕ್ಕಿಂಥ ನಮ್ಮ ಹಕ್ಕನ್ನು ಕಿತ್ತುಕೊಳ್ಳುವಂಥ ಪ್ರವೃತ್ತಿಯಾದರೆ ಹೇಗೆ? ಇವರಿಗೆ ಸಂಖ್ಯೆ ಹಿಡಿಸಿದ್ದರೆ, ಆ ಸಂಖ್ಯೆಯ ಮತ್ತಿನಿಂದ ಈ ರೀತಿ ಮಾಡುತ್ತಿದ್ದಾರೆಯೇ ಈ ರಾಜ್ಯದ ಜನರ ಪರವಾಗಿ ಕೆಲಸ ಮಾಡುವುದಕ್ಕೆ ನಾವುಶಾಸನಸಭೆಗೆ ಬಂದಿದ್ದೇವೆ. ಅದಕ್ಕಾಗಿ ನಿಯಮಗಳನ್ನು ರೂಪಿಸಿಕೊಂಡಿದ್ದೇವೆ. ಇಷ್ಟೊಂದು ಎತ್ತರದ ಧ್ವನಿಯಲ್ಲಿ ಮಾತನಾಡುವುದು ಸರಿಯಲ್ಲ ಕೂಗಾಟ ಏನು? ನಾನು ನಿನ್ನೆ ಒಬ್ಬ ಹಿರಿಯ ಮಾನ್ಯ ಸದಸ್ಯರ ಮಾತನ್ನು ಕೇಳಿ ಸಹಿಸಿಕೊಂಡೆ ಅವರು 'ನಿಮ್ಮ ನಿಮ್ಮ ಕ್ಷೇತ್ರಗಳಿಗೆ ನೀವು ಹೋಗದ್ದೀರೊ ಇಲ್ಲವೋ? ಎಂದು ಹೇಳಿದರು. ಯಾರ್‍ಯಾರು ಯಾವ್ಯಾವ ಕ್ಷೇತ್ರಕ್ಕೆ ಹೋಗಿದ್ದಾರೆ ಅಥವಾ ಬಿಟ್ಟಿದ್ದಾರೆಯೇ ಎನ್ನುವುದನ್ನು ಇವರಿಂದ ವಿಮರ್ಶೆ ಮಾಡಿಸುವುದೇ ಆದುದರಿಂದ, ಇದರ ಬಗ್ಗೆ ಒಂದು ಸಾರಿ ನಿರ್ಣಯ ಆಗಬೇಕು. ಆ ನಿರ್ಣಯವಾಗುವವರೆಗೆ ಸದನದಲ್ಲಿ ಪಾಲ್ಗೊಳ್ಳಬೇಕೇ ಎನ್ನುವುದನ್ನು ನಾವೆಲ್ಲಾ ಒಟ್ಟುಗೂಡಿ ಮಾತನಾಡುತ್ತೇವೆ. ಅಲ್ಲಿಯವರೆವಿಗೂ ಈ ಪ್ರವೃತ್ತಿಯಲ್ಲಿ ನಾವು ಕೆಲಸ ಮಾಡುವುದಕ್ಕೆ ಸಿದ್ಧರಿಲ್ಲ. ಆದುದರಿಂದ, ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಸಂದರ್ಭದಲ್ಲಿ ವಿರೋಧಪಕ್ಷದ ನಾಯಕರಾದ ಶ್ರೀ ಡಿ.ಬಿ. ಚಂದ್ರೇಗೌಡರು, ಸದಸ್ಯರುಗಳಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಶ್ರೀ ಬಸವರಾಜ ರಾಯರೆಡ್ಡಿ,ಶ್ರೀ ಬಿ.ಎಚ್. ಬನ್ನಿಕೋಡ್ ಮತ್ತು ಶ್ರೀ ಶಿವಾನಂದ ಹೆಚ್ ಕೌಜಲಗಿಯವರು ಸಭಾತ್ಯಾಗ ಮಾಡಿದರು.)

(ಗೊಂದಲ)

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷಿಣಿಯವರೇ, ಇವೊತ್ತು ಈ ಸದನದಲ್ಲಿ ಒಂದು ಘಟನೆ ನಡೆದಿದೆ. ಮಾನ್ಯ ಸಭಾಧ್ಯಕ್ಷರಾಗಿರತಕ್ಕಂಥವರು, ನಿಯಮಾವಳಿ ಪ್ರಕಾರ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸದೇ ಇದ್ದರೆ ನಾನು ಇಲ್ಲಿ ಕುಳಿತುಕೊಳ್ಳುವುದಿಲ್ಲ, ನಿವೃತ್ತಿಯಾಗುವುದಕ್ಕೆ ಅವಕಾಶ ಮಾಡಿಕೊಡಿ ಎನ್ನತಕ್ಕಂಥ ವಿಷಯವನ್ನು ಸದನದ ಮುಂದಿಟ್ಟರು. ನಾವೆಲ್ಲರೂ ಕೂಡ ಸರ್ಕಾರದ ಕಡೆಯಿಂದ ಮತ್ತು ಈ ಕಡೆಯಿಂದ ಅಧ್ಯಕ್ಷರಿಗೆ ಆಶ್ವಾಸನೆ ಕೊಟ್ಟಿದ್ದೇವೆ. ನಾವು ನಿಯಮಾವಳಿ ಪ್ರಕಾರ ನಡೆದುಕೊಳ್ಳುತ್ತೇವೆ. ನಿಮ್ಮ ಎಲ್ಲಾ ರೀತಿಯಾದಂಥ ಸಹಕಾರ ಕೊಡುತ್ತೇವೆ ಎನ್ನತಕ್ಕಂಥ ಆಶ್ವಾಸನೆ ಕೊಟ್ಟು ಇನ್ನೂ ಒಂದು ಗಂಟೆಯಾಗಿಲ್ಲ ಆಗಲೇ ಈ ರೀತಿ ನಡೆದುಕೊಳ್ಳುತ್ತಿದ್ದೇವೆ. ಮಾನ್ಯಶ್ರೀ ಯಡಿಯೂರಪ್ಪನವರು ಒಂದು ಪಕ್ಷದಿಂದ ಗೆದ್ದು ಬಂದಿದ್ದಾರೆ. ಅವರು ಜನತೆಯ ಮುಂದೆ ಹೋಗಿ ನಾವು ಈ ರೀತಿ ಮಾಡುತ್ತೇವೆಂದು ಹೇಳಿದ್ದಾರೆ. ಅವರಿಗೆ ಇಲ್ಲಿ ಮಾತನಾಡತಕ್ಕಂಥ ಹಕ್ಕಿದೆ. ಅವರು ಅನ್‌ಪಾರ್ಲಿಮೆಂಟರಿಯಾಗಿರತಕ್ಕಂಥ ಯಾವುದಾದರೂ ಪದವನ್ನು ಉಪಯೋಗಿಸಿದ್ದರೆ, ಅದನ್ನು ನಿಯಾಮಾವಳಿ ಪ್ರಕಾರ ನಿಯಂತ್ರಿಸುವುದಕ್ಕೆ ತಾವು ಇದ್ದೀರಿ. ಅನ್‌ಪಾರ್ಲಿಮೆಂಟರಿಯಾಗಿ ಅವರೇನೂ ಮಾತನಾಡಲಿಲ್ಲ. ಅವರು ಹೇಳಬೇಕಾಗಿರುವುದನ್ನು ಹೇಳುವುದಕ್ಕೂ ಕೂಡ ಇಲ್ಲಿ ಅವಕಾಶ ಇಲ್ಲದಿದ್ದರೆ ಇನ್ನೆಲ್ಲಿ ಹೋಗಿ ಹೇಳಬೇಕು? ಈ ರೀತಿ ಭಾಷಣ ಮಾಡುತ್ತಿರುವಾಗ ಪದೇ

ಇವತ್ತು ಅವರನ್ನನುಸರಿಸಿ ವಿರೋಧಪಕ್ಷದವರು ಅವರ ನಾಯಕರಾದಿಯಾಗಿ ಎಲ್ಲರೂ ಅವರ ಜೊತೆ ಹೊರಗಡೆ ಹೋಗಿದ್ದಾರೆ. ಸರ್ಕಾರ ಇದನ್ನು ಎಂದೂ ಬಯಸುವುದಿಲ್ಲ. ಈ ಸದನದಲ್ಲಿ ಮಾತನಾಡತಕ್ಕ ಹಕ್ಕಿನ ಹಿನ್ನೆಲೆಯಲ್ಲಿ ಪ್ರತಿಯೊಬ್ಬರಿಗೂ ಅವಕಾಶವಿದೆ. ಆದರೆ ಮಾತನಾಡಬೇಕಾದರೆ ತಮ್ಮ ಅನುಮತಿಯನ್ನು ಪಡೆದು ಮಾತನಾಡಬೇಕಾಗುತ್ತದೆ. ಇಲ್ಲಿ ನಿಯಮದ ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ. ಆದರೂ ಇಲ್ಲಿ ಒಂದೊಂದುಸಾರಿ ಸಮಯ, ಸಂದರ್ಭಗಳು ಬೇರೆ ರೀತಿ ಬರುತ್ತದೆ. ಒಂದೊಂದು ಸಾರಿ ನಾವು ನಮ್ಮ ನಮ್ಮ ಅಭಿಪ್ರಾಯಗಳನ್ನು ಎಕ್ಸ್‌ಛೇಂಜ್ ಮಾಡಿಕೊಳ್ಳುತ್ತೇವೆ. ನಾವೂ ಕೂಡ ಆ ಕಡೆ ಕುಳಿತಿದ್ದಾಗ, ಈ ಕಡೆ ಇರುವಾಗ ಒಂದೊಂದು ಸಾರಿ ಎದ್ದು ಮಾತನಾಡತಕ್ಕ ಸಂದರ್ಭ ಬರುತ್ತದೆ. ಆದರೆ ಇದನ್ನು ಇತಿಮಿತಿಗೆ ಒಳಪಡಿಸಿದರೆ ಒಳ್ಳೆಯದು. ಇದನ್ನು ಎರಡೂ ಕಡೆಯವರಿಗೆ ಅನ್ವಯ ಮಾಡಬೇಕು. ಇದನ್ನು ನಮ್ಮ ಕಡೆಯವರಿಗೆ ಹೇಳತಕ್ಕದ್ದು, ಅಥವಾ ಅವರ ಕಡೆಯವರಿಗೆ ಹೇಳತಕ್ಕದ್ದಲ್ಲ. ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಆದಷ್ಟೂ ಅವಕಾಶವನ್ನು ಮಾಡಿಕೊಡತಕ್ಕ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಇಲ್ಲದಿದ್ದರೆ ಸದನದ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗತಕ್ಕದ್ದು ಬಹಳ ಕಷ್ಟ ಆಗುತ್ತದೆ. ಇದನ್ನು ನಾವು ಅಂತಿಮವಾಗಿ ನೋಡಬೇಕು. ತಮಗೆ ಸಂಪೂರ್ಣ ಸಹಕಾರ ಯಾವಾಗ ಬರುವುದಕ್ಕೆ ಸಾಧ್ಯ ಎಂದರೆ, a very healthy intervention. There is nothing wrong in intervening. If it is a healthy one. ಅದು ಬಂದರೆ ಡಿಬೇಟ್‌ಗೆ ಒಂದು ಕಳೆ ಬರುತ್ತದೆ. I want to be on record. ಆದರೆ ಇದನ್ನು ಬಿಟ್ಟು ಜಾಸ್ತಿಯಾದರೆ ಅದಕ್ಕೆ ಅಡೆತಡೆಯಾಗುತ್ತದೆ ಎಂಬ ಭಾವನೆ ಬರುತ್ತದೆ. ಅದು ಆಗದಂತೆ ನೋಡಿಕೊಳ್ಳತಕ್ಕ ಜವಾಬ್ದಾರಿಯನ್ನೂ ಕೂಡ ನಾವು ನಿರ್ವಹಣೆ ಮಾಡುತ್ತೇವೆ. ನಾವು ತಮ್ಮಲ್ಲೂ ಕೂಡ ವಿನಂತಿ ಮಾಡಿಕೊಳ್ಳುತ್ತೇವೆ. ಮತ್ತೊಬ್ಬರು ಮಾನ್ಯ ಸದಸ್ಯರು ಮಾತನಾಡುವಾಗಲೂ ಕೂಡ ಇದೇರೀತಿ ನಡೆದುಕೊಳ್ಳಬೇಕು. ಈ ರೀತಿ ನಡೆದುಕೊಳ್ಳಬೇಕಾದ ಜವಾಬ್ದಾರಿ ಎರಡೂಕಡೆಯವರ ಮೇಲಿದೆ. ಈ ರೀತಿ ಮಾಡಿ ತಮಗೆ ಸಂಪೂರ್ಣ ಸಹಕಾರವನ್ನು ಕೊಟ್ಟರೆ ತಾವು ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅನುಕೂಲವಾಗುತ್ತದೆ. ಈ ಜವಾಬ್ದಾರಿ ನಮ್ಮೆಲ್ಲರ ಮೇಲೂ ಇದೆ. ಅದರಲ್ಲೂ ಸರ್ಕಾರದಮೇಲೆ ಇನ್ನೂ ಜಾಸ್ತಿ ಇದೆ. ಇದರ ಹಿನ್ನೆಲೆಯಲ್ಲಿ ತಮಗೆ ನಾನು ಆಶ್ವಾಸನೆ ಕೊಡುತ್ತೇನೆ. ತಮ್ಮ ಮುಖಾಂತರ ಮಾನ್ಯ ಸದಸ್ಯರಾದ ಯಡಿಯೂರಪ್ಪನವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಹೇಳತಕ್ಕ ಧಾಟಿಯಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸ ಇದ್ದೇ ಇರುತ್ತದೆ. ನಾಳೆ ಅವರು ಬರಲಿ. ಏಕೆಂದರೆ, ಇವತ್ತು ಅವರು ಈ ಸದನ ಮುಗಿಯುವುದರೊಳಗೆ ಬರಲಿಕ್ಕೆ ಸಾಧ್ಯವಿಲ್ಲ ಎಂದು ನನ್ನ ಅನಿಸಿಕೆ. ಇವತ್ತು ಅವರು ಬರುವ ವಿಚಾರವನ್ನು ತಮಗೆ ಬಿಡುತ್ತೇವೆ. ನಾಳೆಯಾದರೂ ಅವರು ಬಂದಕೂಡಲೇ ತಮ್ಮ ಭಾಷಣವನ್ನು ಮುಂದುವರಿಸಲಿ ಒಳ್ಳೆಯ ರೀತಿಯಲ್ಲಿ ನಾವು ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗೋಣ. ತಮ್ಮ ಅನುಮತಿಯನ್ನು ಪಡೆದು ನಾನು ಈ ಎರಡು ಮಾತುಗಳನ್ನು ಆಡಿದ್ದೇನೆ.

ಅಧ್ಯಕ್ಷರು : ಇದು ಸರ್ಕಾರಿ ಕಾರ್ಯಕಲಾಪ ಇದು ಮಾನ್ಯ ರಾಜ್ಯಪಾಲರ ಭಾಷಣದಮೇಲೆ ನಡೆದಿರತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ ಇದರಲ್ಲಿ ವಿರೋಧಪಕ್ಷದವರ ಮೇಲಿರುವುದಕ್ಕಿಂತ ಆಡಳಿತ ಪಕ್ಷದವರ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ ಎಂದು ನನ್ನ ಭಾವನೆ. ನಾವು ಪ್ರತಿಯೊಂದು ಟೇಬಲ್

ಪದೇ ಅಡ್ಡಿಪಡಿಸತಕ್ಕಂಥ ನೀತಿಯನ್ನು ನಾನು ಪ್ರತಿಭಟಿಸುತ್ತಾ ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಸಂದರ್ಭದಲ್ಲಿ ಸದಸ್ಯರಾದ ಶ್ರೀ ಸಿ. ಬೈರೇಗೌಡರು ಸಭಾತ್ಯಾಗ ಮಾಡಿದರು)

ಶ್ರೀ ಎ.ಬಿ. ಜಕನೂರು : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಶ್ರೀ ಬಿ. ಎಸ್. ಯಡಿಯೂರಪ್ಪನವರು ಸಿಟ್ಟಿನ ಭರದಲ್ಲಿ ಶ್ರೀ ವೈ. ನಾಗಪ್ಪನವರನ್ನು ಉದ್ದೇಶಿಸಿ 'ನೀನ್ಯಾರೋ ನನಗೆ ಹೇಳಲಿಕ್ಕೆ' ಎಂದು ಹೇಳಿದ್ದಾರೆ. ಅದು ಕಡತಕ್ಕೆ ಹೋಗಿರುವುದರಿಂದ ಆ ಪದವನ್ನು ಕಡತದಿಂದ ತೆಗೆಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಆಗಬಹುದು.

(ಗೊಂದಲ)

ಶ್ರೀ. ವೈ. ನಾಗಪ್ಪ : ಇವರು ವಿಧಾನಸಭೆಯಲ್ಲಿ ಛಾಲೆಂಜ್ ಮಾಡುತ್ತಿದ್ದಾರೆ. ಛಾಲೆಂಜ್ ಮಾಡುವುದು ಹೊರಗಡೆ ಚುನಾವಣೆಯಲ್ಲಿ ಇಲ್ಲಿ ಏನು ಅವರು ಛಾಲೆಂಜ್ ಮಾಡುವುದು?

MADAM CHAIRMAN : The House stands adjoeurn to meet at 5.00 P.M.

(ಸಭೆಯು ಸಂಜೆ 6.05 ಗಂಟೆಗೆ ಪುನಃ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಎಂ. ಕೃಷ್ಣ ಅವರು ಅಧ್ಯಕ್ಷ ಪೀಠಕ್ಕೆ ಆಗಮಿಸಿದರು)

ಮುಖ್ಯ ಮಂತ್ರಿಗಳಿಂದ ಮನವಿ

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) : ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವ ಕಾಲದಲ್ಲಿ ಸ್ವಲ್ಪ ಅಡೆತಡೆ ಉಂಟಾಯಿತೆಂಬ ಭಾವನೆಯಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸಾಧ್ಯವಾಗುತ್ತಿಲ್ಲ ಎಂದು ಅವರು ಹೊರಗೆ ಹೋದರೆಂದು ತಿಳಿದುಬಂತು. ಆ ಸಂದರ್ಭದಲ್ಲಿ ನಾನು ಇರಲಿಲ್ಲ. ಈ ಸಂದರ್ಭದಲ್ಲಿ ಅವರಿಗೆ ಉತ್ತರ ಕೊಡತಕ್ಕದ್ದು ನಮ್ಮ ಕರ್ತವ್ಯ. ಆ ಸದಸ್ಯರೇ ಇರಬಹುದು. ಬೇರೆ ಮಾನ್ಯ ಸದಸ್ಯರು ಯಾರೇ ಇರಬಹುದು. ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಕೂಡ ಮಾತನಾಡುವುದಕ್ಕೆ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸುವುದಕ್ಕೆ ಹಕ್ಕು ಇದೆ. ಅದೇರೀತಿ ಅಭಿಪ್ರಾಯವನ್ನು ವ್ಯಕ್ತಪಡಿಸಿದಮೇಲೆ ಅದಕ್ಕೆ ಏನು ಉತ್ತರವನ್ನು ಕೊಡಬೇಕೆಂಬುದಕ್ಕೆ ನಮಗೂ ಕೂಡ ಹಕ್ಕು ಇದ್ದೇ ಇರುತ್ತದೆ. ಆ ಹಕ್ಕಿನ ವ್ಯಾಪ್ತಿಯಲ್ಲಿ ಕವರ್ ಮಾಡುವುದಕ್ಕೆ ನಮಗೂ ಸಾಧ್ಯಾವಾಗುತ್ತದೆ. ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಹಿರಿಯ ಸದಸ್ಯರು, ಅವರೂ ಕೂಡ ತಡೆದುಕೊಳ್ಳಬಹುದಿತ್ತು. ಅವರೂ ಕೂಡ ಸಾಕಷ್ಟು ವಿಚಾರವನ್ನು ಮಾತನಾಡಿದ್ದರೂ, ಇನ್ನೂ ಸ್ವಲ್ಪ ಮಾತನಾಡುವುದು ಇತ್ತು. ಅವರೂ ಕೂಡ ಅದಕ್ಕೆ ಸಾಧ್ಯವಾಗಲಿಲ್ಲ ಎಂಬುದನ್ನು ಕೇಳಿ ನಮಗೂ ಸಮಾಧಾನ ಆಗಲಿಲ್ಲ.